Dup

# ಶಿವಶರಣರ ಪದಗಳು.

ಡಾ|| ಫ. ಗು. ಹಳಕಟ್ಟಿ.

BL-C-177

890
6893

ಶಿವಾನುಭವ ಗ್ರಂಥಮಾಲಾ ನಂ॥ ೬೦

# ಶಿವಶರಣರ ಪದಗಳು.

## ಭಾಗ ೧.

( ಕರಸ್ಥಲದ ನಾಗಲಿಂಗಪ್ಪ, ಮಲ್ಲೇನಹಳ್ಳಿ ಚನ್ನಬಸವದೇವರು, ಹೊನ್ನುಡಿಕೆ ಗಂಗಾಧರ ಸ್ವಾಮಿಗಳು ಮೊದಲಾದವರ ಪದಗಳು)

ಸಂಪಾದಕರು:

ರಾ. ಬ. ಪಿ. ಜಿ. ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ.

ವಿಜಾಪುರ.

890
6893

೧೯೪೩

( ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ. )

ಬೆಲೆ ರೂ॥ ೦–೧೨–೦

ಇದನ್ನು ವಿಜಾಪುರದಲ್ಲಿ
ರಾ. ಬ. ಪಿ. ಜಿ. ಹಳಕಟ್ಟಿ ಬಿ. ಎ., ಎಲ್. ಎಲ್ ಬಿ ಇವರು
ತಮ್ಮ **ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ** ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ೧೬೨೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

890
6893

# ಪ್ರಸ್ತಾವನೆ.

ವೀರಶೈವರಲ್ಲಿ ಭಕ್ತಿ ರಸವನ್ನು ಸೂಸುವ ಸುಂದರವಾದ ಪದ್ಯಗಳು ಅಸಂಖ್ಯಾತವಾಗಿವೆ. ವಚನಗಳು, ರಗಳೆಗಳು, ತ್ರಿಪದಿಗಳು ಮೊದಲಾದವುಗಳಂತೆ ಇವುಗಳಿಗೂ ವೀರಶೈವ ವಾಙ್ಮಯದಲ್ಲಿ ಉಚ್ಚ ಸ್ಥಾನವಿದೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವದು ಒಂದು ಮಹತ್ವದ ಕಾರ್ಯವಾಗಿರುತ್ತದೆ. ಇಂಥ ಕವಿಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಆಗಿ ಹೋಗಿದ್ದಾರೆ. ಅವರು ರಚಿಸಿದ ಪದಗಳು ಆಯಾ ಭಾಗಗಳಲ್ಲಿ ಪ್ರಚಲಿತವಿರುತ್ತವೆ. ಇವುಗಳನ್ನು ರಚಿಸಿದವರು ಬಹುಶಃ ಸಾಧುಗಳೂ, ಆಚಾರ ನಿಷ್ಠರೂ ಆಗಿ, ಪಾರಮಾರ್ಥಿಕ ಬೋಧೆಯನ್ನು ಯಾವಾಗಲೂ ಮಾಡುತ್ತ ಜನತೆಯಲ್ಲಿ ಅತ್ಯಂತ ಮನ್ನಣೆಯನ್ನು ಹೊಂದಿದವರಿರುತ್ತಾರೆ. ಇಂಥವರು ರಚಿಸಿದ ಪದ್ಯಗಳಲ್ಲಿ ಉಚ್ಚ ತರದ ಭಕ್ತಿ ಭಾವವು ಯಾವಾಗಲೂ ತುಂಬಿಕೊಂಡಿರುತ್ತದೆ. ಇಂಥ ಪದಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಸಂಗ್ರಹಿಸುತ್ತ 'ಶಿವಶರಣರ ಪದಗಳು' ಎಂಬ ಹೆಸರಿನಿಂದ ಒಂದು ಮಾಲೆಯನ್ನು ಪ್ರಕಟಿಸಬೇಕೆಂದು ಯೋಚಿಸಿ, ಇದರ ಒಂದನೇ ಭಾಗವನ್ನು ಈಗ ಹೊರಪಡಿಸಿದ್ದೇವೆ. ಮುಂದೆ ಪದಗಳು ನಮಗೆ ದೊರೆದ ಹಾಗೆ ಅವುಗಳನ್ನು ಬೇರೆ ಬೇರೆ ಭಾಗಗಳಲ್ಲಿ ಕ್ರಮೇಣ ಪ್ರಸಿದ್ಧಿಸುತ್ತ ಹೋಗುವೆವು. ಈ ಗ್ರಂಥದಲ್ಲಿ ಕರಸ್ಥಲದ ನಾಗಲಿಂಗಪ್ಪ, ಹಾಗಲವಾಡಿ ಮುದಿಯಪ್ಪ ನಾಯಕರ ಮಗಳು, ಮಲ್ಲೇನಹಳ್ಳಿಯ ಚನ್ನಬಸವ ದೇವರು, ಹೊನ್ನುಡಿಕೆಯ ಗಂಗಾಧರ ಸ್ವಾಮಿಗಳು ಈ ಮಹಾತ್ಮರ ಪದಗಳು ಬಂದಿವೆ. ಈ ಪದಗಳನ್ನು ನಮಗೆ ಕಳಿಸಿಕೊಟ್ಟ ಶ್ರೀಯುತ ಎಚ್. ಆರ್ ಮಹಾಂತಯ್ಯ ಬಿ. ಏ. ಎಲ್. ಎಲ್. ಬಿ. ಆ್ಯಡವೋಕೇಟ ತುಮಕೂರು ಮತ್ತು ಯಜಮಾನ್ ರುದ್ರಯ್ಯಾ ಇವರಿಗೆ ಆಭಾರಿಯಾಗಿದ್ದೇವೆ.

ವಿಜಾಪುರ
ತಾ। ೨೪—೬—೪೩

ಫ. ಗು. ಹಳಕಟ್ಟಿ.
ಸಂಪಾದಕ

ಇದನ್ನು ವಿಜಾಪುರದಲ್ಲಿ

ರಾ. ಬ. ಪಿ. ಜಿ. ಹಳಕಟ್ಟಿ ಬಿ. ಎ., ಎಲ್. ಎಲ್ ಬಿ ಇವರು

ತಮ್ಮ **ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ** ಮುದ್ರಿಸಿದರು.

ಮತ್ತು ಅವರು ವಿಜಾಪುರದಲ್ಲಿ

ಉಪಲಿಬುರುಜದ ಹತ್ತರ ೧೬೨೦ (ಅ) ನೇ ಮನೆಯಲ್ಲಿ

ಪ್ರಕಟಿಸಿದರು.

890
6893

# ಪ್ರಸ್ತಾವನೆ.

ವೀರಶೈವರಲ್ಲಿ ಭಕ್ತಿ ರಸವನ್ನು ಸೂಸುವ ಸುಂದರವಾದ ಪದ್ಯಗಳು ಅಸಂಖ್ಯಾತವಾಗಿವೆ. ವಚನಗಳು, ರಗಳೆಗಳು, ತ್ರಿಪದಿಗಳು ಮೊದಲಾದವುಗಳಂತೆ ಇವುಗಳಿಗೂ ವೀರಶೈವ ವಾಙ್ಮಯದಲ್ಲಿ ಉಚ್ಚ ಸ್ಥಾನವಿದೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವದು ಒಂದು ಮಹತ್ವದ ಕಾರ್ಯವಾಗಿರುತ್ತದೆ. ಇಂಥ ಕವಿಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಆಗಿ ಹೋಗಿದ್ದಾರೆ. ಅವರು ರಚಿಸಿದ ಪದಗಳು ಆಯಾ ಭಾಗಗಳಲ್ಲಿ ಪ್ರಚಲಿತವಿರುತ್ತವೆ. ಇವುಗಳನ್ನು ರಚಿಸಿದವರು ಬಹುಶಃ ಸಾಧುಗಳೂ, ಆಚಾರ ನಿಷ್ಠರೂ ಆಗಿ, ಪಾರಮಾರ್ಥಿಕ ಬೋಧೆಯನ್ನು ಯಾವಾಗಲೂ ಮಾಡುತ್ತ ಜನತೆಯಲ್ಲಿ ಅತ್ಯಂತ ಮನ್ನಣೆಯನ್ನು ಹೊಂದಿದವರಿರುತ್ತಾರೆ. ಇಂಥವರು ರಚಿಸಿದ ಪದ್ಯಗಳಲ್ಲಿ ಉಚ್ಚ ತರದ ಭಕ್ತಿ ಭಾವವು ಯಾವಾಗಲೂ ತುಂಬಿಕೊಂಡಿರುತ್ತದೆ. ಇಂಥ ಪದಗಳನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಸಂಗ್ರಹಿಸುತ್ತ 'ಶಿವಶರಣರ ಪದಗಳು' ಎಂಬ ಹೆಸರಿನಿಂದ ಒಂದು ಮಾಲೆಯನ್ನು ಪ್ರಕಟಿಸಬೇಕೆಂದು ಯೋಚಿಸಿ, ಇದರ ಒಂದನೇ ಭಾಗವನ್ನು ಈಗ ಹೊರಪಡಿಸಿದ್ದೇವೆ. ಮುಂದೆ ಪದಗಳು ನಮಗೆ ದೊರೆದ ಹಾಗೆ ಅವುಗಳನ್ನು ಬೇರೆ ಬೇರೆ ಭಾಗಗಳಲ್ಲಿ ಕ್ರಮೇಣ ಪ್ರಸಿದ್ಧಿಸುತ್ತ ಹೋಗುವೆವು. ಈ ಗ್ರಂಥದಲ್ಲಿ ಕರಸ್ಥಲದ ನಾಗಲಿಂಗಪ್ಪ, ಹಾಗಲವಾಡಿ ಮುದಿಯಪ್ಪ ನಾಯಕರ ಮಗಳು, ಮಲ್ಲೇನಹಳ್ಳಿಯ ಚನ್ನಬಸವ ದೇವರು, ಹೊನ್ನುಡಿಕೆಯ ಗಂಗಾಧರ ಸ್ವಾಮಿಗಳು ಈ ಮಹಾತ್ಮರ ಪದಗಳು ಬಂದಿವೆ. ಈ ಪದಗಳನ್ನು ನಮಗೆ ಕಳಿಸಿಕೊಟ್ಟ ಶ್ರೀಯುತ ಎಚ್. ಆರ್ ಮಹಾಂತಯ್ಯ ಬಿ. ಏ. ಎಲ್. ಎಲ್. ಬಿ. ಆ್ಯಡವೋಕೇಟ ತುಮಕೂರು ಮತ್ತು ಯಜಮಾನ್ ರುದ್ರಯ್ಯಾ ಇವರಿಗೆ ಆಭಾರಿಯಾಗಿದ್ದೇವೆ.

ವಿಜಾಪುರ
ತಾ। ೨೪—೬—೪೩

ಫ. ಗು. ಹಳಕಟ್ಟಿ.
ಸಂಪಾದಕ

# ಶರಣ ಸಾಹಿತ್ಯ.

## ಲಿಂಗಪೂಜಾಸ್ತುತಿ.

೧

ಬಾ, ಬಾ, ಬಾ, ಬಾ, ಬಾರೋ ಲಿಂಗಯ್ಯ.
ಶೋಭಿತ ಧವಳಾಂಗ, ಸುಗುಣಾಂತರಂಗ ॥ಪ॥

ಗಂಗೆಯತಂದು ಮಜ್ಜನವನಾನೆರೆವೆ
ಅಂಗಜನುರುಹಿದ ಭಸಿತ ತಂದಿಡುವೆ
ಮಂಗಳವೆನೆ ಶ್ರೀಗಂಧ ಲೇಪಿಸುವೆನು
ಜಂಗಮಲಿಂಗ ಎನ್ನಂಗೈಯಪೀಠಕ್ಕೆ ॥೧॥

ಜಾಜಿಮಲ್ಲಿಗೆ ಚೆಲ್ವ ಸುರಗೆಸಂಪಗೆಯು
ಸೋಜಿಗವಾದ ತುಂಬೆಯ ಪುಷ್ಪದಿಂದ
ಮೂಜಗದೊಡೆಯ ನಿರಾಲಂಬ ಶಿವಲಿಂಗ
ಪೂಜಿಪೆ ಎನ್ನಯಸರ್ವಾಜ್ಞಕರಕೆ ॥೨॥

ಘಮ ಘಮ ಘಮವೆಂಬ ಧೂಪವಾಸನೆಯು
ಕ್ರಮದಿಂದ ಘೃತಬತ್ತಿ ದೀಪಾರಾಧನೆಯು
ಸಮ ಚಾರ ಮಹದೇವ ನೈವೇದ್ಯ ತಾಂಬೂಲ
ರಮಣನಿರಂಜನ ನಿಮಗರ್ಪಿಸುವೆ ದೇವ ॥೩॥

---

೨

## ಪ್ರಮಥರ ಸ್ತುತಿ.

ಮಾಡುವೆ ಶರಣು ಮಾಡುವೆ ನಮ್ಮ
ಕೂಡಲಸಂಗನ ಶರಣರ ಪಾದಕ್ಕೆ ॥ಪಲ್ಲ॥

ಮೇದರ ಕೇತಯ್ಯ ಮೆರೆಮಿಂಡ ದೇವಯ್ಯ
ಆಯ್ದಕ್ಕಿ ಮಾರಯ್ಯ ಅಜಗಣ್ಣಗೆ
ಮೈದುನ ರಾಮಯ್ಯ ಮಡಿನಾಳ ಮಲುಹಣ
ಸಾಧಿಸಿ ಮರುಳುಶಂಕರ ಸಿದ್ಧರಾಮಗೆ ॥೧॥

ನಂಬೆಣ್ಣ ನಾಗಯ್ಯ ಬೆಂಬಿಡದೆ ಚಾರಮ
ಕಂಬಳಿ ಮರುಳುಕಕ್ಕಯ್ಯನಿಗೆ
ಉಂಬ ಪ್ರಸಾದದಲಿ ಉದ್ಭವಿಸಿದಾತಗೆ
ಅಂಬಿಗರ ಚೌಡಯ್ಯ ಘನಘಟ್ಟಿವಾಳಗೆ ॥೨॥

ಮೊಲ್ಲೆ ಬೊಮ್ಮೈಗಳು ಮಧುವರಸ ಬಾಚರಸ
ಬಿಲ್ವಬಿಂಕದ ಮಾರಯ್ಯನಿಗೆ
ಬಲ್ಲಾಳ ಗೊಲ್ಲಾಳ ಕನ್ನಪ್ಪ ಕಲಿಕಾಮ
ನುಲಿಯ ಚಂದಯ್ಯ ಮೋಳಿಗೆ ಮಾರಯ್ಯನಿಗೆ ॥೩॥

ಸತ್ಯಕ್ಕ ಪಿಟ್ಟವ್ವೆ ಶ್ರೀ ನೀಲಲೋಚನೆ
ಮುಕ್ತಾಯಿ ಚಂಗಳೆ ಗೊಗ್ಗವ್ವೆಗೆ
ಸತ್ತ ಗಂಡನ ಪಡೆದು ಹೆತ್ತ ಮಗನ ಕೊಂದು
ಚಿತ್ತಲೆ ಕದಳಯೊಳ್ ಪೊಕ್ಕ ಮಹದೇವಿಗೆ ॥೪॥

ಕರವೆ ಏಳ್ನೂರು ಎಪ್ಪತ್ತು ಗಣಂಗಳು
ಅರವತ್ತುಮೂರು ಪುರಾತನರು
ಪರಿಪರಿ ಶ್ರೀಗಂಧ ಪುಷ್ಪ ಧೂಪ ದೀಪ
ಹರಿಪರಿಯಿಂದ ಶ್ರೀಪ್ರಭುವಿನ ಪಾದಕ್ಕೆ ॥೫॥

---

೩

## ನಿರಾಳ ಗುರು ಸ್ತೋತ್ರ.

ಶ್ರೀಮದಮಲಾನಂದ ನತಜನ ।
ಪ್ರೇಮಶಾಶ್ವತ ಶಾಂತರವಿಶಶಿ ।
ಧಾಮ ನಿರ್ಜರನಿತ್ಯ ನಿಗಮಸ್ತೋಮನುತಚರಣ ॥
ಕಾಮ ಸಂಹರ ವರಕೃಪಾಕರ ।
ನಾಮ ಸೀಮೆಗಳಿಲ್ಲದಚಲಿತ ।
ಸ್ವಾಮಿ ಘನತರ ಪರಮ ಶ್ರೀಗುರುದೇವ ಶರಣಾರ್ಥಿ ॥೧॥

ಬಡವ ನಡೆನಡೆಯುತ್ತ ಭಾಗ್ಯವ ।
ನೆಡಹಿ ತಾ ಕಂಡಂತೆ, ರೋಗಿಯು ।
ತಡಕುತಿರ್ಪೌಷಧಿಯು ಲತೆ ಕಾಲ್ತೊಡರಿ ಕಾಣ್ಬಂತೆ ॥

ಒಡಲ ಕ್ಷುಧೆಯಿಂದಲೆಯುವನು ಪಾ।
ಲ್ಗಡಲ ನಿಧಿರಲಿ ಕಂಡ ತೆರನೆ॥
ನ್ನೊಡೆಯ ಶ್ರೀಗುರುದೇವನಂಘ್ರಿಯ ಕಂಡು ಬದುಕಿದೆನು ॥೨॥

ಗುರುವೆ ಪರತರನಿತ್ಯ ನಿರುಪಮ ।
ಗುರುವೆ ಪರಶಿವ ನಿತ್ಯನದ್ವಯ ।
ಗುರುವೆ ಪರಬ್ರಹ್ಮಸ್ವರೂಪ ಸ್ವತಂತ್ರ ಘನವಹಿಮ ॥
ಗುರುವೆ ಮುಕ್ತಿಗೆ ಮೂಲ ನಿಶ್ಚಲ
ಗುರುವೆ ಸುರುಚಿರಭೇದ್ಯ ನಿರ್ಮಲ
ಗುರುವಿನಿನ್ನೊಂದಧಿಕವಿಲ್ಲೆನುತಿಹವು ಶೃತಿತತಿಯು ॥೩॥

ಕಂಡೆನಿದಿರಲಿ ಭಾವಭರಿತನ
ಕಂಡೆನಿದಿರಲಿ ಸತ್ಯ ಚರಿತನ
ಕಂಡೆನಿದಿರಲಿ ಶಾಂತಕಾಂತನ ನಿತ್ಯ ನಿರ್ಗುಣನ ॥
ಕಂಡೆನಿದಿರಲಿ ಕರ್ಮರಹಿತನ
ಕಂಡೆನಿದಿರಲಿ ಧರ್ಮ ಸಹಿತನ
ಕಂಡೆನಿದಿರಲಿ ಪರಮ ಶ್ರೀಗುರುದೇವನಂಘ್ರಿಯನು ॥೪॥

ಹರಹರನಾನೆಂ ಕೃತಾರ್ಥನೋ
ದುರಿತ ದುರ್ಗುಣ ಮೋಹ ದುಃಖದ
ಪರಿಭವವ ಕಡೆಗಟ್ಟಿ ಮಾಯೆಯ ಸುಟ್ಟು ಮುದದಿಂದ ॥
ಪರಮ ಶಿವ ಪದವಿಯನು ಎನ್ನೊಳು
ಕರುಣದಿಂದಲಿ ತೋರಿ ಸಲಹಿದ
ತುರ್ಯತೀತಾನಂದ ಶ್ರೀಗುರುದೇವ ಶರಣಾರ್ಥಿ ॥೫॥

ಒಮ್ಮೆ ಶ್ರೀಗುರು ಲಿಂಗವೆನುತಲಿ
ಒಮ್ಮೆ ಶ್ರೀಗುರು ಬಸವನೆನುತಲಿ
ಒಮ್ಮೆ ಶ್ರೀ ರುದ್ರೇಶನೆನುತಲಿ ಬಂದು ಜಗದೊಳಗೆ ॥
ಹಮ್ಮು ಬಿಮ್ಮುಗಳಿಲ್ಲದಚಲಿತ
ಬ್ರಹ್ಮದಾದಿಯ ಕಂಡು ಬೆಳಗನು
ಒಮ್ಮನದಿ ನೋಡೆಂದು ತೋರಿದ ಗುರುವೆ ಶರಣಾರ್ಥಿ ॥೬॥

ಶರೀರ ಮಲಿನವಿದೆಂದು ಖಂಡಿಸಿ
ಪರಮ ನಿರ್ಮಲವೆಂದು ಪೂಜಿಸಿ
ಮರಣಬಾಧೆಯೊಳಿರ್ಪ ಸಿದ್ಧಾಂತಿಗಳ ಮತಕೊಗದೆ ॥
ದುರುಳ ವೇದಾಂತಿಗಳ ಮಾತಿನ
ಬರಿಯ ಬೊಮ್ಮದ ಬೋಧೆಯುಲ್ಲಿಸು
ಹರನೊಳಗೆ ಸಮರಸವ ತೋರಿದ ಗುರುವೆ ಶರಣಾರ್ಥಿ ॥೭॥

ಅಂಗದಜ್ಞಾನವನು ದಹಿಸಿ, ಚಿ
ದಂಗ ನಿರ್ಮಲ ಮಾಡಿ ಶಿವಕಳೆ
ತುಂಗ ಭಸಿತವಿದೆಂದು ಫಣೆಯೊಳಗಿಟ್ಟು ಮುದದಿಂದ ॥
ಹಿಂಗದಿರುತಿಹ ಪಶ್ಚಿಮದ ಘನ
ಲಿಂಗವನು ಕರದಲ್ಲಿ ಸ್ಥಾಪಿಸಿ
ಮಂಗಳಾತ್ಮಕನೆನಿಸಿ ಸಲಹಿದ ಗುರುವೆ ಶರಣಾರ್ಥಿ ॥೮॥

ಪರಮ ಗುರು ಚರಲಿಂಗ ಶೇಷವು
ಚರಣಜಲ ರುದ್ರಾಕ್ಷಿ ಭೂತಿಯು
ವರ ಷಡಕ್ಷರ ಮಂತ್ರ ಘನತರದಷ್ಟಾವರಣಗಳು ॥
ಪರಶಿವನು ತಾನಾದೆನೆನುತಲಿ
ಶರೀರ ಮನ ಭಾವೇಂದ್ರಿಯಾತ್ಮಸು
ಕರಣದೊಳಗಳವಡಿಸಿ ತೋರಿದ ಗುರುವೆ ಶರಣಾರ್ಥಿ ॥೯॥

ಲಿಂಗವೆನೆ ಪರಮಾತ್ಮ ಪಾವನ
ಲಿಂಗವೆನೆ ಪರತತ್ವ ಪರಶಿವ
ಲಿಂಗವೆನೆ ಪರಬ್ರಹ್ಮ ಪರತರ ಘನಕೆ ಘನಮಹಿಮ ”
ಲಿಂಗವೆನೆ ವರಮಂತ್ರ ರೂಪವು
ಲಿಂಗವೆನೆ ನಿರ್ವಯಲೆನುತ್ತದ
ರಿಂಗಿತವನೆನ್ನೊಳಗೆ ತೋರಿದ ಗುರುವೆ ಶರಣಾರ್ಥಿ ॥೧೦॥

ಲಿಂಗಮಧ್ಯದೊಳಖಿಳಮಂತ್ರವು
ಲಿಂಗಮಧ್ಯದೊಳಖಿಳ ತಂತ್ರವು
ಲಿಂಗಮಧ್ಯದೊಳಖಿಳಕೋಟಿ ಬ್ರಹ್ಮಾಂಡವಿರುತಿಹವು ॥

ಲಿಂಗಮಧ್ಯದೊಳಖಿಳ ತತ್ವವು
ಲಿಂಗಮಧ್ಯದೊಳಖಿಳ ತೋರಿಕೆ
ಲಿಂಗದೊಳು ಸಮರಸವ ತೋರಿದ ಗುರುವೆ ಶರಣಾರ್ಥಿ ॥೧೧॥

ಲಿಂಗದೊಳು ನಡೆ ಲಿಂಗದೊಳು ನುಡಿ
ಲಿಂಗದೊಳು ಸಕಲೇಂದ್ರಿಯಾತ್ಮಸು
ಲಿಂಗದೊಳು ತನುಭಾವ ಕರಣಗಳೊಂದು ಉರಿಯಾಗಿ ॥
ಲಿಂಗದೊಳು ಕೀಲಿಸಿದ ಕಣ್ಗಳು
ಹಿಂಗದಿರೆ ನಿಜಮುಕ್ತಿಎನುತಲಿ
ಮಂಗಳಾತ್ಮಕನೆನಿಸಿ ಸಲಹಿದ ಗುರುವೆ ಶರಣಾರ್ಥಿ ॥೧೨॥

ನೇತ್ರಲಿಂಗದ ಜನನಸ್ಥಲ ನಿಜ
ನೇತ್ರಲಿಂಗದ ಸ್ನೇಹ ಸಮರಸ
ನೇತ್ರಲಿಂಗದ ಪುಷ್ಪಮಜ್ಜನ ಕಲಶ ಚಿನ್ಮಯವು ॥
ನೇತ್ರ ಲಿಂಗದ ದೇಹ ಮಂದಿರ
ನೇತ್ರ ಪರಶಿವ ಬ್ರಹ್ಮವೆನುತಲಿ
ನೇತ್ರ ಮಹಿಮೆಯ ತೋರಿ ಸಲಹಿದ ಗುರುವೆ ಶರಣಾರ್ಥಿ ॥೧೩॥

ಆರು ಭೂತಗಳಾರು ಚಕ್ರಗ
ಳಾರು ಲಿಂಗಗಳಾರು ಅಂಗಗ
ಳಾರು ಮುಖಕರ ಶಕ್ತಿ ಭಕ್ತಿಗಳಾರು ದ್ರವ್ಯಗಳು ॥
ಆರು ಶೇಷಗಳಾರು ಮಂತ್ರಗ
ಳಾರು ಕಲೆಗಳ ಬೆಳಗಿನಿರವನು ಆ
ವರಿಸಿ ನಿಜವೆಂದು ತೋರಿದ ಗುರುವೆ ಶರಣಾರ್ಥಿ ॥೧೪॥

ಆರು ಸ್ಥಲದಗ್ರದಲಿ ರಾಜಿಪ
ಮೂರು ಮಂಡಲ ಬೆಳಸಿಕೊಂಡಿಹ
ಧೀರಗಣ ರುದ್ರಾದಿ ವಸ್ತು ಶಕ್ತಿಗಳ ಮಧ್ಯದೊಳು ॥
ಚಾರು ಚೌಕದ ಮಧ್ಯಪೀಠದಿ
ಪೂರವಿಸಿ ಥಳಥಳಿಸಿ ಬೆಳಗುವ
ಸಾರ ನಿಷ್ಕಳ ಘನವ ತೋರಿದ ಗುರುವೆ ಶರಣಾರ್ಥಿ ॥೧೫॥

ಮನದ ಕೋಣೆಯೊಳಿರ್ಪ ಲಿಂಗಕೆ
ಮನವೆ ಮಜ್ಜನ ಮನವೆ ಗಂಧವು
ಮನವೆ ಅಕ್ಷತೆ ಮನವೆ ಪುಷ್ಪವು ಮನವೆ ಘನ ಧೂಪ ||
ಮನವೆ ದೀಪವು ಮನವೆ ಅರ್ಪಣ
ಮನವೆ ತಾಂಬೂಲವಾಗಿ ಸಂತತ
ಮನವನೆನ್ನೊಳು ತೋರಿ ಸಲಹಿದ ಗುರುವೆ ಶರಣಾರ್ಥಿ ||೧೬||

ಒಮ್ಮೆ ಘ್ರಾಣದೊಳೊಮ್ಮೆ ಜಿಹ್ವೆಯೊ
ಳೊಮ್ಮೆ ನೇತ್ರದೊಳೊಮ್ಮೆ ಶ್ರೋತ್ರದೊ
ಳೊಮ್ಮೆ ತ್ವಕ್ಕಿನೊಳೊಮ್ಮೆ ಹೃದಯದಳೊಮ್ಮೆ ಭಾವದೊಳು ||
ಒಮ್ಮೆ ಕರಣದೊಳೊಮ್ಮೆ ಮನದೊಳ
ಗೊಮ್ಮೆ ಒಳಹೊರಗಿಡಿದು ಬೆಳಗುವ
ಬ್ರಹ್ಮದಾಟವಿದೊಂದು ತೋರಿದ ಗುರುವೆ ಶರಣಾರ್ಥಿ ||೧೭||

ಬಯಲ ರೂಪಾಗಿರ್ದ ಲಿಂಗಕೆ
ಬಯಲ ಹಸ್ತದೊಳಿರಿಸಿ ಸಂತತ
ಬಯಲ ಪೂಜೆಯ ಮಾಡಿ ಮನ ಮುಳುಗಾಡಿ ಮುದದಿಂದ ||
ಬಯಲ ದ್ರವ್ಯಗಳರ್ಪಿಸುತ ಚಿ
ದ್ಬಯಲ ಶೇಷವನುಂಡು ಸುಖಿಸುವ
ಬಯಲೊಳಗೆ ನಿರ್ವಯಲ ತೋರಿದ ಗುರುವೆ ಶರಣಾರ್ಥಿ ||೧೮||

ಮನವೆ ಕ್ಷಣ ಪಾತಾಳಕೈದುದು
ಮನವೆ ಕ್ಷಣದೊಳು ಗಗನಕೈದುದು
ಮನವೆ ಕ್ಷಣದೊಳಗಷ್ಟದೆಸೆಗಳ ಬಳಸಿ ಬಂದಿಹುದು
ಮನಗಳೊಬ್ಬಳಿಯಾಗಿ ನಿಂದೊಡೆ
ಮನವೆ ಮಹಘನ ಲಿಂಗವೆನುತಲಿ
ಅನುವನೆನ್ನೊಳು ತೋರಿ ಸಲಹಿದ ಗುರುವೆ ಶರಣಾರ್ಥಿ ||೧೯||

ಎಲ್ಲಿ ನೋಡಿದಡಲ್ಲಿ ಲಿಂಗವು
ಎಲ್ಲಿ ಮುಟ್ಟಿದೊಡಲ್ಲಿ ಲಿಂಗವು
ಎಲ್ಲಿ ಮನದಾನಂದ ತೋರಿದೊಡಲ್ಲಿ ಘನ ಲಿಂಗ ||

ಎಲ್ಲಿ ಭಾವಿಸಲಲ್ಲಿ ಲಿಂಗವು
ಎಲ್ಲ ಲಿಂಗದ ರೂಪೆನುತ ತೆರ
ವಿಲ್ಲದೆನ್ನೊಳು ತೋರಿ ಸಲಹಿದ ಗುರುವೆ ಶರಣಾರ್ಥಿ ॥೨೦॥

ತೆರಹಿಡಿದ ನಡೆ ತೆರಹಿಡಿದ ನುಡಿ
ತೆರಹಿಲ್ಲದೊಡನಾಟದನುಭವ
ತೆರಹಿಡಿದ ಸಂಭಾಷಣೆಯು ಸುಖ ತೆರಹಿಡಿದ ನೋಟ ॥
ತೆರಹಿಡಿದ ಧ್ಯಾನಾರ್ಚನಾರ್ಪಣ
ನಿರುಪಮದ ಘನಲಿಂಗ ನಿಜದೊಳು
ತೆರಹಿಡಿದು ಸಮರಸವ ತೋರಿದ ಗುರುವೆ ಶರಣಾರ್ಥಿ ॥೨೧॥

ಶರಿರ ಗುಣಧರ್ಮಗಳು ಬಯಲವು
ಹಿರಿದು ಮರವೆಗಳೆಲ್ಲ ಬಯಲವು
ಹೊರಗೊಳಗೆ ಪರಿಪೂರ್ಣವೆಂಬುದು ನೆರಹು ತಾ ಬಯಲು
ಕರಣ ಮನಭಾವಗಳು ಬಯಲವು
ಕುರುಹು ಪೂಜೆಯು ಧ್ಯಾನ ಬಯಲವು
ಅರಿವು ನಿರ್ವಯಲೆಂದು ತೋರಿದ ಗುರುವೆ ಶರಣಾರ್ಥಿ ॥೨೨॥

ಶರಣು ಕರುಣಾಕಾರ ನಿಶ್ಚಲ
ಶರಣು ಮರಣವಿರಹಿತನಿರ್ಮಲ
ಶರಣು ಶಶಿರವಿಬಿಂಬ ಮಂಡಲ ಮೂರ್ತಿ ಘನಕೀರ್ತಿ ॥
ಶರಣು ನತಜನ ಪಾಲ ಪಾವನ
ಶರಣು ಪರತರ ಜ್ಞಾನವಾಹನ
ಶರಣು ತ್ರೈಜಗದೊಡೆಯ ಶ್ರೀಗುರುದೇವ ಶರಣಾರ್ಥಿ ॥೨೩॥

ಶರಣು ನಿತ್ಯನೆ ಶರಣು ಸತ್ಯನೆ
ಶರಣು ಶಾಶ್ವತ ಶರಣು ಭಾಸ್ವಿತ
ಶರಣು ಕಂಧರ ಶರಣು ಬಂಧುರ ಶರಣು ಭವನಾಶ ॥
ಶರಣು ಶೀಲನೆ ಶರಣು ಲೋಲನೆ
ಶರಣು ಶಾಂತನೆ ಶರಣು ಕಾಂತನೆ
ಶರಣು ತ್ರೈಜಗದೊಡೆಯ ಶ್ರೀಗುರುದೇವ ಶರಣಾರ್ಥಿ ॥೨೪॥

ಈ ತರದ ಗುರುಸ್ತೋತ್ರ ನಾಮವ ।
ನೋತು ಬರೆದಿರ್ದೊಡೆ ಮನದೊಳು ।
ಪೂತಮಯ ಸುಜ್ಞಾನ ಸಂಜನಿಸುವುದು ದಿಟ ಬಳಿಕ ॥
ಜಾತಿ ಸೂತಕ ಭ್ರಾಂತಳಿದು ನಿ ।
ರ್ಜಾತ ನಿರುಪಮ ನಿತ್ಯ ಘನಪರಂ
ಜ್ಯೋತಿ ಶ್ರೀಗುರು ಬಸವಲಿಂಗನೊಳೈಕ್ಯ ಸಿದ್ಧಿಪುದು ॥೨೫

---

೪

ಕಾಣಬಾರದಂಥ ಲಿಂಗವ ಕಂಡೆನವ್ವಾ ಎನ್ನ
ಪ್ರಾಣ ಕಾಂತ ಗುರುವಿನುಪದೇಶದಿಂದ ॥ಪ॥

ಮೂರು ದಾರಿ ಮಾರ್ಗ ಪಥದಿ ಪೋದೆನವ್ವ।
ಘಾರುಣಿಯೆಲ್ಲವ ಕಳೆದು ನಿಂದೆನವ್ವ॥
ಸೇರಿ ಮೂರರೊಳು ಮುಕ್ತನಾದೆನವ್ವ।
ಸಾರಿಸಾರಿ ಯನ್ನಗುರುವು ಅರುಹಿದನವ್ವ ॥೧॥

ಶ್ರೀಕೂಟಾಚಲವೆಂಬ ಪುರವ ಪೊಕ್ಕೆನವ್ವ।
ಅಖಿಳವಿಧದ ಪೂರ್ಣ ಭಸಿತ ಇಟ್ಟೆನವ್ವ॥
ತ್ರಿದಳುಳ್ಳ ಪುಷ್ಪ ಪೂಜಿಸಿದೆನವ್ವ।
ಪದುಳದಿಂದರ್ಘ್ಯ ಪಾದ್ಯವಿಟ್ಟೆನವ್ವ ॥೨॥

ಷಡಮಲಾಮೃತದ ತೀರ್ಥ ಸವಿದೆನವ್ವ।
ಅದಗೂಡಿ ಪ್ರಸಾದ ಸವಿದೆನವ್ವ।
ಕಾಮವಳಿದು ಮೋಕ್ಷ ಕಾಮವಾಯಿತವ್ವ।
ಮಾಯವಳಿದು ಮನೆಯ ಸತಿಯು ನೆರೆದೆನವ್ವ ॥೩॥

ಆಯಾ ಸಂಸಾರಸುಖವನರಿತೆನವ್ವ।
ಗುರುವಿನಾಯದಿಂದ ಎನಗೆ ಸಾಧ್ಯವಾಯಿತವ್ವ।
ತ್ರಿವಿಧಭಾವದಿಂದ ಭವವ ಪರಿವುದವ್ವ ॥೪॥

ತ್ರಿವಿಧಮೂಲ ತ್ರಿಗುಣವಳಿದು ನಿಂದೆವವ್ವಾ।
ಶಿವಯೋಗಿ ನಂಜೇಶ ದಯವಾದನವ್ವ।
ಶಿವಾವ ಧೂತರೊಳಗೆ ನಾ ಬೆರೆದೆನವ್ವ ॥೫॥

೫

## (ಕರಸ್ಥಲದ ನಾಗಲಿಂಗಪ್ಪನವರು ಹಾಡಿದ್ದು)

ಆರುಗಾಲಿ ಕೀಲುಮೂರು ಏರಿ ಮೇಲೆ ಕುದುರಿ ಕುಣಿಸೊ।
ವಾರಿಜಾಕ್ಷ ಎನ್ನ ನೋಡಯ್ಯ ಓ ಪರಮಹಂಸ ಪಾರಿಜಾತದ
ಕಮಲ ಕಂಡೆನು ॥೧॥

ವಾರಿಜಾಕ್ಷಿ ಹೆಣ್ಣೆ ಕೇಳೆ ಪಾರಿಜಾತದ ಕಮಲವ ಕಂಡೆ।
ಮೂರಿ ಪ್ರಣವನಾದದೊಳಗೆಲ್ಲ ಓ! ಮುಕ್ತಿಕಾಂತೆ ಏರಿ ನೋಡೆ
ಏಳು ನೆಲೆಯನು ॥೨॥

ಕೀಲು ಸಂಚಿನೆ ಕೇರಿನ ಮೇಲೆ ಕಿನ್ನಡಿಯ ನುಡಿಸೊ ಜಾಣ।
ಕಣ್ಣ ತಿರುಹಿ ಎನ್ನ ನೋಡಯ್ಯ ಓ ಪರಮಹಂಸ ಕಿನ್ನಡಿಗೆ
ಕಾಯ ಕಳುಹೆನು ॥೩॥

ಸನ್ನೆ ಸಂಜ್ಞೆಯಿಲ್ಲದ ಹೆಣ್ಣೆ। ಎನ್ನ ಕೂಡ ಸರಸಬೇಡ
ಕಣ್ಣು ತಿರುಹಿದ ಕಾರಣವೇನು ಹೇಳೆ। ಓ! ಮುಕ್ತಿಕಾಂತೆ ಹುಣ್ಣಿವೆ
ಚಂದ್ರನಾ ಕಂಡೆ ॥೪॥

ಏಳು ನೆಲೆಯ ಮೇಲೆ ಕುಳಿತು ವೀಣೆಯ ಶೃತಿ ಮಾಡುವ ಯೋಗಿ
ಮಾಜದೆ ಎನ್ನೊಳು ಕೂಡಯ್ಯ, ಓ! ಪರಮಹಂಸ ಜಾಣನಹುದು
ನಾಗಲಿಂಗಯ್ಯ ॥೫॥

---

೬

ಎಂಥ ಗಾರುಡಿಗ ಸದ್ಗುರುಮೂರ್ತಿ ಎಂಥ ಗಾರುಡಿಗ ॥ಪ॥

ಶರಣುಮಾಡೆಂದೊಡೆ ಶರಣುಮಾಡುತಲಿದ್ದೆ।
ಕರದಲ್ಲೇನಿತ್ತು ಜೀವಿಯ ಬೂದಿ ||
ಶಿರದ ಮೇಲೆ ಎನ್ನ ನೈಮೇಲೆರೆಯಲು।
ಶರೀರವ ಮರೆದು ಮನ ಸಾಕ್ಷಿಯಾದನೆ ॥೧॥

ಯಾರೂ ಇಲ್ಲದ್ದ ನೋಡಿ ಬೇರೆನ್ನ ಕರೆದೊಯ್ದು।
ಮೋರೆ ಕಿವಿಯೊಳಗಿಟ್ಟು ಮಂತ್ರಿಸಿದ ॥
ನಾರಿ ಬದುಕು ಮನೆ ಮಕ್ಕಳನೆಲ್ಲ।
ಸೇರುಸೇರದ ಹಾಂಗೆ ಮಾಡಿದನೆ ॥೨॥

ಕುಲಗೇಡಿ ಛಲಗೇಡಿ ಸಂಗಗೇಡಿಯಾದೆ।
ಇವನ ವಿಶ್ವಾಸದ ಫಲದಿಂದ॥
ಇವನ ಸೋಲಿನ್ನ ವ್ಯಾಕುಲ ಹೆಚ್ಚಿತು।
ವ್ಯವಹಾರಿಂಬುದು ಎಡವಟ್ಟಾಯಿತು॥೩॥

ಮಂತ್ರಿಸಿದ ಕ್ರಿಯೆ ಮಾರಳೇನೆಂದರಿಲ್ಲ।
ಮಂತ್ರತಂತ್ರಕ್ಕದು ಜಗ್ಗಲಿಲ್ಲ॥
ಮಂತ್ರದ ಮಹಿಮೆ ಮಹಾನು ಮಹಿಮನೆ ಬಲ್ಲ।
ಮಂತ್ರಕಾರರೊಳು ಗುರು ದೊಡ್ಡವನೆ॥೪॥

ಇವನ ನಂಬಿದ ಮೇಲೆ ಇವನಂತೆ ಅಲ್ಲದೆ।
ಭುವನಕ್ಕೆ ತಿರುಗಿನ್ನು ಬರಲಿಲ್ಲ॥
ವಿವರಿಸೆ ಕುರುಡಿಲ್ಲ ಹೇಳಿ ಕೇಳುವರಿಲ್ಲ।
ಭುವನ ಚಿದಾನಂದ ರಕ್ಷಿಸನೇ ಗುರು॥೫॥

---

೭

## ಹಾಗಲವಾಡಿ ಮುದಿಯಪ್ಪನಾಯಕರ ಮಗಳು ರಚಿಸಿದ್ದು.

ಮುತ್ತೈದೆಯಹುದು ನಾನು ಸತ್ತುಹುಟ್ಟುವರಿಗೆ ಸೆರಗು ಹಾಸುವಳಲ್ಲ।
ಮುತ್ತೈದೆತನ ಮಾಜುವಳಲ್ಲವೋ॥ಪ॥

ಕರ್ತೃಶ್ರೀಗುರು ಚನ್ನಸಂಗಮೇಶ್ವರಲಿಂಗ।
ಕರಸ್ಥಲಕೆ ನೆಲೆಗೊಂಡ ಬಳಿಕ॥ಅನುಪ॥

ಶರಣುಕುಲದವರೆಲ್ಲ ವರವ ಬೇಡಲಿಕ್ಕಾಗಿ।
ಪರಲೋಕದರಸು ಪಟ್ಟದ ರಮಣನು॥
ಹರುಷದಿಂದೆದುರ್ಗೊಂಬ ಸಮಯದೊಳು ನಾ ಕಂಡೆ।
ಪರವಶದಿ ಮೈಮರೆದೆ ತೊರೆದೆ ಲಜ್ಜೆಯನು॥೧॥

ಆತ್ಮಕುಲದವರೆಲ್ಲ ಗೋತ್ರಸೂತ್ರವ ನೋಡಿ।
ಆತ್ಮಕೂಟಗಳಿಂದ ಆಯ್ತು ವಿವಾಹ॥
ರಾತ್ರಿ ಸರಿ ಹೊತ್ತಿನಲಿ ಲಗ್ನ ನಿಶ್ಚಯ ಮಾಡಿ।
ವೇದೋಕ್ತದಿಂದೆನಗೆ ಆಯ್ತು ವಿವಾಹ॥೨॥

ಮೂರು ಕೂಟದ ಮೇಲೆ ಮೌನ ಕಂಭವ ನಿಲಿಸಿ ।
ಸಾರತತ್ವಂಗಳೆಂಬ ಮೇಲ್ಕಟ್ಟ ಕಟ್ಟಿ ॥
ಜೀರುತಿದೆ ಪ್ರಣವ ಮೃದಂಗವುಂ ಲಾಲಿಸುತೆ
ಧಾರೆಯೆರೆದರು ಎನ್ನ ಧಗಧಗಿಪ ಚಿನ್ಮಯಗೆ ॥೩॥

ಶರಣಸತಿ ಲಿಂಗಪತಿ ಎಂದು ಭಸಿತವ ಧರಿಸಿ ।
ಕರೆದು ನಾಲ್ವರ ಮುಂದೆ ಸಾಕ್ಷಿಯನೆ ಇಟ್ಟು ॥
ಶರಗ ಗಂಟಿಕ್ಕಿ ಕರವಿಡಿದು ಕಂಕಣ ।
ಧರಿಸಿ ಸತಿಪುರುಷರೆಂದು ಸೇಸೆಯನಿಟ್ಟ ಬಳಿಕ ॥೪॥

ಪಂಚ ಕಲಶವು ಪಂಚ ನಳಿತಳಿರು ಎಳೆಸುತ್ತಿ ।
ಪಂಚಾಭಿಷೇಕ ಮೋದಕ ಹಸ್ತದಿ ।
ಪಂಚಮುಖದೊಡೆಯನ ಕಳೆಯೇರಿ ಗುರುಪ್ರಣವ ।
ಪಂಚಾಕ್ಷರೀ ಶಿಕ್ಷೆಯೆನಗಿತ್ತ ಬಳಿಕ ॥೫॥

ತಂದೆತಾಯಿಗಳೆಂಬ ಹಂಬಲನೆ ತಾರದೆ ।
ಹಿಂದೆ ಗಂಡಧ್ಯಾನ ನಿಮಿಷವೆಡಬಿಡದೆ ॥
ಚಂದದಿಂ ನಾಕಬಲಿ ಮೆರೆವಣಿಗೆಯುಂ ಮಾಡಿ ।
ತಂದು ಕೊಟ್ಟರು ಕಾಮಧೇನೆಂಬ ಬಲುಹುಲಿಯ ॥೬॥

ಆರು ತಿಂಗಳ ಮೇಲೆ ಆದೆ ನಾ ಶೋಭನವ ।
ಸೇರಿದೆನು ಬ್ರಹ್ಮಾಂಡ ಗಂಡನರಮನೆಯ ॥
ಆರು ಸರಿಯಿಲ್ಲೆನಗೆ ಇಲ್ಲ ಜನ್ಮಗಳಿನ್ನು ।
ತೂರ್ಯವಾಯಿತು ಗಮನ ಹುಚ್ಚಾದ್ಯರೊಡವೆರೆದೆ ॥೭॥

---

೮

ಜಾರೆಯೊಂದೆನಲೆನ್ನ ಮಾರುತ್ತರವನೀವೆ ।
ಪರಮಾರ್ಥ ಜ್ಞಾನಿ ನೀ ಪುಸಿಯನುಸಿರುವರೆ ॥ಪ॥

ಒಬ್ಬನಿಗೆ ತನುವಿತ್ತೆ ಒಬ್ಬನಿಗೆ ಮನವಿತ್ತೆ ।
ಒಬ್ಬನಿಗೆ ಧನವಿತ್ತೆ ಅಂತಲ್ಲದೆ ॥
ಹಬ್ಬದ ಹವಣರಿತು ಹಲವು ಮಂದಿಯ ಕೂಡಿ ।
ಮಬ್ಬಿನಲಿ ಪೋಗಿ ಮುಂಜಾಪದಲಿ ಬರುವೆ ॥೧॥

ಒಬ್ಬನೊಳು ನೋಟ ಮತ್ತೊಬ್ಬನೊಳು ಕೂಟ
ಬೇರೊಬ್ಬನೊಳು ಮಧುರವೆರಸಿದ ಊಟ
ಒಬ್ಬನೊಳು ಸರಸ ಸಂಗೀತ ಸುಖದೋಲಾಟ
ಒಬ್ಬನೊಳು ತೆಕ್ಕೆ ಮತ್ತೊಬ್ಬರಿಗೆ ಧಕ್ಕೆ ॥೨॥

ಮುಗುಳು ನೊಲೆಗಳ ಮುಟ್ಟೆ ಮಧುರ ಮಾತುಗಳಾಡಿ।
ಬಗೆಬಗೆಯು ಬಂಧನದ ಕಳೆಗಳರುಹಿ ॥
ಸೊಗಸುತಿಹ ಸವಿಗಲೆಯು ಸಲ್ಲಿದರೆ ಮನಸೋತು
ಜಗದ ಭೀತಿಯು ಬಿಟ್ಟು ಜಾರೆ ಹೆಣ್ಣಾದೆ ॥೩॥

ಕಣ್ಣಿಟ್ಟ ಮೇಲವನ ಕಡೆಗೆ ಬಿಟ್ಟವಳಲ್ಲ।
ಹೆಣ್ಣೆ, ಹಾ! ಎಂದವನ ಹಿಂಗಲಿಲ್ಲ॥
ಹುಣ್ಣಿಮೆಯು ಬೆಳಕಿನೊಳು ಹೊಳೆದವನ ಎಡೆಬಿಡದೆ
ಸಣ್ಣಬಾಗಿಲ ಮನೆಯೊಡವೆರೆದೆ ರಮಣಿ ॥೪॥

ಮರೆಯ ಮಾತಿನ್ನೇನು ನೂರೊಂದು ಮಂದಿಯನು।
ನೆರೆದು ಬಾಳಿದುದುಂಟು ಲೋಕಕಂಜಿ
ಕುರುಹಿಗೊಬ್ಬನ ಕೂಡಿಕೊಂಡಿಹೆನು ಆದರಿಂದ।
ಗುರುಸಿದ್ಧರಾಮ ಮನವಿಲ್ಲದವನಾ ॥೫॥

---

೯

ಸುಖವಾಯಿತೆನಗೆ ಭವರುಜೆಗಳಿಲ್ಲೆಲೆ ಕಾಂತೆ।
ಅಕಳಂಕ ಚಂದ್ರಶೇಖರನಿಂದಾ ॥ಪ॥

ನಾರಿ ಕೇಳೆನ್ನ ಕರವಿಡಿದು ನಾಡಿಯ ನೋಡಿ।
ಮೂರು ದೋಷಗಳು ಹೆಚ್ಚಿರಲು ಕಂಡು।
ಮೂರು ತನುವಿನ ಮೇಲೆ ಮೂರು ಮುದ್ರೆಯನೊತ್ತಿ।
ಮೂರು ಗುಳಿಗೆಯ ನಿತ್ತಾರೈದ ರಮಣಿ ॥೧॥

ಆಶೆ ಎಂತೆಂಬ ಜ್ವರ ಹೆಗ್ಗಳಿಸುತಿರೆ ಕಂಡು।
ಈಶ ಜಲಪತ ಕಷಾಯ ವೆರೆದು।
ಶೇಷ ಪ್ರಸಾದವಿದು ಪಥ್ಯ ನಿನಗೆಂದರುಹಿ।
ಬೇಸರದೆ ಪೇಳಿ ರಕ್ಷಿಸಿದ, ಕಮಲಾಕ್ಷಿ ॥೨॥

ಭವರೋಗವೊಳು ಬಹಳ ನವೆದು ಶಿರನೋವುತಿದೆ ।
ನವ ಭಸಿತವ ನಿನ್ನ ಫಣೆಗಿಟ್ಟು ಬೇನೆ ।
ಭುವಿಯೊಳೊಂದೊಂದೂ ಬಾರದೆಂದರುಹಿ ।
ಯುವತಿ, ಸಲಹಿದ ಕಾಣೆ, ಜಾಣೆ, ನಿನ್ನಾಣೆ ॥೩॥

ಭೂತ ಪಂಚಕವೆಂಬ ಧಾತು ಹೆಚ್ಚಿರಲೆನಗೆ ।
ಜಾತಿ ಮಂತ್ರಗಳಿಂದವನು ಕೆಡಿಸಿ ।
ಪ್ರೀತಿ ಚೂರ್ಣವನಿತ್ತು ವಾತಗುಣಗಳ ಬಿಡಿಸಿ
ಆತ ಸಲಹಿದ ಕಾಣೆ, ಪ್ರವೀಣೆ ॥೪॥

ಹೆದರದಿರು ಮಗನೆ ಬಾರೆಂದು ಕರುಣಾಮೃತದ ।
ಉದಕದಲಿ ಶಿರದೊಳೆದು ಮಹದರಿವಿನ
ಹೊದ್ದಿಕೆಯನೆ ಪೊದಿಸಿ ಸ್ಥಿರಕಾಲ ನೀ ಬಾಳೆಂದು ।
ಚದುರ ಚನ್ನಬಸವೇಶ ಪೊರೆದ ಚಿತ್ಕಾಂತೆ ॥೫॥

---

೧೦

ಗಂಡಕಲಿಸಿದ ಹಾದರವನಾನೇನು ಬಲ್ಲೆನೆ ನೆರೆಮನೆ
ತುಂಡು ಮುಂಡರೆಲ್ಲ ಆಡಲಿಕ್ಕವರಂಜಿ ತೆನಗೇನೆ
ಪೂರ್ವದಲ್ಲಿ ಐದು ಮಂದಿ ಊರಗೌಡರ ಹೋಗುತಿದ್ದೆ
ಆರುಮಂದಿ ಪಾರಗಳನು ದೂರ ಮಾಡಿದ್ದೆ
ಬೇರೆ ಒಬ್ಬ ಪುರುಷ ಬಂದು ಮೋರೆ ನೋಡೆನ್ನೊಳಗೆ ಒಯ್ದು
ಭಾರಿಗುಣದವಳೆಂದು ಮುತ್ತಿನಹಾರ ಹಾಕಿದನೆ
ಪಟ್ಟಮಂಚವ ಹಾಸಿ ನಾನು ಮುಟ್ಟಿಸಿದ್ದೆ ಜ್ಯೋತಿಗಳು
ಅಚ್ಚಮಲ್ಲಿಗೆ ಹುವಿನ ಹರವಿ ಇದಿರಿಗಿಟ್ಟಿದ್ದೆ
ದಟ್ಟಪಟ್ಟೆದೊಂದುಸೀರೆ ಪುಟ್ಟನಿರಿಯು ಹೊಡುತಿದ್ದೆ
ಅವನ ಮುಟ್ಟಿಕೊಂಡು ಹೋದ ಮೇಲಿನ್ನೆಷ್ಟು ಸುಖವಿದೆ
ಓಲೆ ಕೊಪ್ಪು ಜುಮುಕಿ ಬುಗುಡಿ ಮೇಲೆ ರಾಗಟಿ
ಚೌಲಿಗೊಂಡೆ ಬಾಲೆ ಕೇಳಿ ಕುಂದಣ ಹಚ್ಚಿದ ಮೂಗುತಿಟ್ಟಿದ್ದೆ
ಓರೆನೋಟಕೆ ಮೆಚ್ಚಿ ಎನ್ನ ಸೇರದವಳಿನ್ನಾರು ಚದುರು
ಧೀರ ಕೂಡು ಲೇಸು ಬಂದು ತಾನೆ ಕೂಡಿದನು

---

೧೧

ಮೂರು ದಾರಿ ಮೂಲವಿಡಿದು ಪೋದೆವಮ್ಮ ಅಲ್ಲಿದ್ದ ।
ಧಾರುಣಿಯೆಲ್ಲ ಕಳೆದು ನಿಂದೆವಮ್ಮ
ತ್ರಿಕೂಟಾಚಲವೆಂಬ ಪುರವ ಪೊಕ್ಕೆವಮ್ಮ ಅಲ್ಲಿ ।
ಪ್ರಕಟವಾದಂಥ ಲಿಂಗಸಂಗವಮ್ಮ
ಮಕುಟದೊಡನೆ ಮಜ್ಜನ ಮಾಳ್ಪರಮ್ಮ
ಅಖಿಳ ವಿಧದ ಪೂರ್ಣ ಭಸಿತ ವಿಟ್ಟೆವಮ್ಮ
ಸದಮಲಾಮೃತದ ತೀರ್ಥ ಸವಿದೆವಮ್ಮ
ಹದಗೂಡಿದ ಪ್ರಸಾದ ನಾವು ಸಲಿಸೇವಮ್ಮ
ಮಾಯವಳಿದು ಮನೆಯು ಸತಿಯು ನೆರೆದಳಮ್ಮ
ಕಾಮವಳಿದು ಮೋಕ್ಷಕಾಮವಾಯಿತಮ್ಮ
ಗುರುವಿನಾಯದಿಂದ ನನಗೆ ಸಾಧ್ಯವಾಯಿತಮ್ಮ
ಶಿವಯೋಗಿ ನಂದೀಶನ ದಯ ನಮಗಾಯಿತಮ್ಮ

---

೧೨

ಗುರುಮಲ್ಲೇಶನ ಗುಪಿತದ ಯೋಗವು ।
ಯಾರಿಗು ತಿಳಿಯದು ವೀರನು ಧೀರನು ॥ಪ॥
ಆರಸುಮಾರನು ದೂರು ಮಾಡುತೆ ।
ಮೀರಿದುನ್ಮನೆಯೊಳು ಸೇರಿದ ಸದ್ಗುರು ॥೧॥
ಬಾಲಯವ್ವನಕೌಮಾರಿಗಳಿಲ್ಲದೆ ।
ಭಾವಿಸಿ ನೋಡಲು ಬಾಲಬ್ರಹ್ಮಚಾರಿ ॥೨॥
ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣನು ।
ಮೃತ್ಯು ಜಯಿಸಿದ ಮೂಲ ನಿರಂಜನ ॥೩॥
ದೇವನ ಪುರದೊಳು ಧೀರನಭಪತಿಗೆ ।
ಮನವನು ಮರುಗಿಸಿ ಮಾಡಿದ ಗದ್ದುಗೆ ।
ಗುರುಮಲ್ಲೇಶನ ಗುಪಿತದ ಯೋಗವು ॥೪॥

---

ನತಜನಪೋಷಗೆ ಮಂಗಳಂ ಶ್ರೀಮಠ ಕಪುರೀಶಗೆ ಮಂಗಳಂ ।
ಹಿತಮತಿಯೊಡನೊಲಿದೆಮ್ಮನು ಪೋಷಿಸ ಚದುರಹೃದಯಗೆ ॥೨॥

ಶಿಖಿವಾಹನನಿಗೆ ಮಂಗಳಂ ಶಿವಸುಖಪ್ರಪೂರ್ಣಗೆ ಮಂಗಳಂ ।
ಅತುಲಿತಮಹಿಮ ಷಣ್ಮುಖದಿಂದೆಸೆಯುವ ಸಕಲಕಳಾಜ್ಞಗೆ ॥೩॥

---

೧೮

ಮಂಗಳಂ, ಜಯಮಂಗಳಂ, ಶುಭಮಂಗಳಂ, ಶಿವಮಂಗಳಂ
ಕಂಗಳಗ್ರದಿ ನಿಂದು ಚರಿಸುವ ಲಿಂಗದೇವಗೆ ಮಂಗಳಂ ॥ಪ॥

ತಾರಕೇಶಗೆ ಮಂಗಳಂ ಸುರಜಾಲಸೇವಿತ ಮಂಗಳಂ ।
ಮಾರಪಿತ ಕಮಲಾರ್ಚಿತಾಂಘ್ರಿ, ಕುಮಾರ ಪಿತನಿಗೆ ಮಂಗಳಂ ॥೧॥

ಕುಮುದ ಸಖಧರ ಮಂಗಳಂ, ಯಮಿಜನರ ಪೋಷಿಸ ಮಂಗಳಂ ।
ಅಮಿತವಿಕ್ರಮ ಭೀಮಪೂಜಿತ, ವಿಮಲ ಚರಿತನೆ ಮಂಗಳಂ ॥೨॥

ಮಂಗಳಾಂಗನೆ ಮಂಗಳಂ, ಜಗದ್ವಂದ್ಯರೂಪನೆ ಮಂಗಳಂ ।
ಸಂಗದೂರಕೃಪಾಂಗ ಪೂರಿತ, ಲಿಂಗಮಹಾಂತೇಶಗೆ ಮಂಗಳಂ ॥೩॥

---

೧೯

ನಾ ಬೆಳಗುವೆನು ಕಡ್ಡಿಬತ್ತಿ ಶಾಂತವೀರಗೆ । ಶಾಂತವೀರಗೆ । ಪೂರ್ಣ
ಶಾಂತಿಯುಳ್ಳಗೆ ॥ಪ॥

ಸುತ್ತಿತತ್ವ ಜಾಲಕಡ್ಡಿಬತ್ತಿ ಭಕ್ತಿಯ
ಘೃತದೊಳೊತ್ತಿನೆನಸಿ ಹತ್ತಿಸುತ್ತೆಜ್ಞಾನಜ್ಯೋತಿಯ ॥೧॥

ನೂರು ಒಂದು ಸ್ಥಲ ಶರೀರವಾದ ಧೀರಗೆ, ಸಾಂಬ ।
ಮೂರು ಪುರವ ಸುಟ್ಟ ಮಾರಾರಿ ಶೂರಗೆ ॥೨॥

ಭೈಕ್ಷಲೀಲ ಪರಮ ಮೋಹನೋಕ್ಷ ಗಮನಗೆ, ನಿತ್ಯ ।
ಮೋಕ್ಷವೀವ ಕಾಶೀವಿಶ್ವನಾಥ ದೇವಗೆ ॥೩॥

---

೨೦

ಜಯ ಸಚ್ಚಿದಾನಂದ ನಿತ್ಯ ಪರಿಪೂರ್ಣನಿಗೆ, ಜಯತೆಂದು ಬೆಳಗುವೆ ಸಕಲ ಬೀಜನಿಗೆ, ಜಯದೇವ ಜಯದೇವ ॥ಪ॥

ಬಿಂದು ಕಳೆನಾದಾದಿ ಜನಿಯಿಲ್ಲದಂದು ಇಂದುಧರಮುಖ ಲೀಲೆ ಇಲ್ಲದಂದು ॥ ಒಂದೇ ಪರವಸ್ತು ತಾನಾಗಿರುತಿಹುದೆಂದು ಚಂದದಿಂದೆತ್ತುವೆ ಒಂದಾರತಿಯನು ತಂದು ಜಯದೇವ ಜಯದೇವ ॥೧॥

ಗುರುಶಿಷ್ಯ ಶಿವಶಕ್ತಿ ಶಿವಜೀವರೆಂದು ವರಪೂಜ್ಯ ಪೂಜಕ ಧನಿ ಭೃತ್ಯರೆಂದು ॥ ಚರ ಲಿಂಗವಂಗವಾಯ್ತಿರದೆ ಮತ್ತೊಂದು ಎರಡಾರತಿಯನು ತಂದು ಬೆಳಗುವೆನೆಂದು ಜಯದೇವ ಜಯದೇವ ॥೨॥

ಮೂರ್ಲಿಂಗ ಮೂರಂಗ ಮೂರ್ದೇವರೆಂದು ಮೂಲೋಕ ಮೂರ್ತಿತ್ರಗುಣಮಾತ್ರರೆಂದು ॥ ಲೀಲೆಯಿಂ ಮೂವರಣಕ್ಕೊಳಗಾಯಿತೆಂದು ಲೋಲದಿಂದೆತ್ತುವೆ ಮೂರಾರತಿ ತಂದು ಜಯದೇವ ಜಯದೇವ ॥೩॥

ನಾಲ್ಕು ತನು ಲಿಂಗ ಕಳೆ ಚಿದ್ಬಿಂದುನಾದ ನಾಲ್ಕು ಘಟಿತವಾಗಿ ಘನಲಿಂಗವಾದ ॥ ನಾಲ್ಕರಿಂ ಜಗದ ಘನಕೃತ್ಯವಹುದೆಂದು ನಾಲ್ಕಾರತಿಯನು ತಂದು ಬೆಳಗುವೆನೆಂದು ಜಯದೇವ ಜಯದೇವ ॥೪॥

ಪಂಚಮುಖ ಮನು ಕಳೆಯು ಮಾತ್ರೆ ಭೂತಗಳು ಪಂಚೀಕರಿಸಿ ಬ್ರಹ್ಮಾಂಡ ರಚನೆಗಳು ॥ ಪಂಚಾಂಗಲಿಂಗ ಶ್ರೀ ವಿರೂಪಾಕ್ಷಗೆಂದು ಪಂಚಾರತಿಯನು ತಂದು ಬೆಳಗುವೆನೆಂದು ಜಯದೇವ ಜಯದೇವ ॥೫॥

---

೨೧

ಧೂಪೋಯಂ ಪ್ರತಿ ಗೃಹ್ಯತಾಂಜಯ । ಪಾಪಸಂಹಾರ ವಿಹಾರ ಮದ್ಗುರುವೆ ॥ಪ॥

ಭಕ್ತಸುವಾಸನ ಪರಿಮಳ ಸಹಿತಂ । ಯುಕ್ತಮನೋಗತ ಯೋಗವಿಚಾರಂ ॥೧॥

ಶ್ರೀಚಂದನ ಕರ್ಪೂರ ಗುಗ್ಗುಳಿತಂ ಶ್ರೀ ಮಹಿಸಾಕ್ಷಿ ಕೃಷ್ಣಾಗರುಸಹಿತಂ ॥೨॥

ದೇವದಾರು ಕರ್ಪೂರ ಶಿಲಾರಸ ಸುಗಂಧ ಸಮ್ಮಿಳಿತ ಮದ್ಗುರುವೆ ॥೩॥

---

೨೨

ಮಂಗಳಂ ಜಯಮಂಗಳಂ ಶುಭಮಂಗಳಂ ।
ಅಂಗಜಾಂಗಭಂಗ ಗಂಗಾಸಂಗತಮಕುಟ ॥ಪ॥

ಹರಿಸುರವರಕಿನ್ನರಕರ ಪೂಜಿತಚರಣ
ಉರಗಾಭರಣ ಪರಮ ಶರಣ ಕರಧೃತಹರಿಣ ॥೧॥

ಕುಂಜರಹತ ಮಂಜುಲಸುತ ಶಿರಸಭೇದಿತ
ಕಂಜಜಾತ ಗರ್ವದೂರ ಭಂಜಿತದುರಿತ ॥೨॥

ಈಶತ್ರಿದಶಪೋಷಗಿರೀಶ ಭಕ್ತಪಾಲಕ
ಆಶಾನಾಶ ಬಸವೇಶತೋಷಿತ ವೃಷಭ ॥೩॥

---

೨೩

ಶ್ರೀಗುರುವರಜಯತು ಭೋಗಿವಿಭೂಷ ಯೋಗಿವರ್ಯನೆಜಯತು ॥ಪಲ್ಲ॥

ಆಗಮಸ್ಮೃತಿನುತಚರಣಶಿವ । ತ್ಯಾಗಭೋಗವಿರಾಗರಹಿತನೆ ॥
ಯೋಗಿತತಿನುತಬಾಗಿನಮಿಸುತ । ಲಿಂಗಬೆಳಗುವೆಮುಕ್ತಿನಾರತಿ ॥೧॥

ರುದ್ರಾಕ್ಷಿಮಂಟಪದಿ ಪ್ರಕಾಶಿಪ ರುದ್ರಾಕ್ಷಮಾಲಾಧರ ।
ರುದ್ರನಾಜ್ಞೆಯನನುಸರಿಸಿ ಭೂರುದ್ರನೆನಿಸಿದ ದೇವದೇವನೆ ।
ರುದ್ರಶರಣ ಸಮಾಜ ಸರ್ವದಾ ರುದ್ರತಾರಕ ಮಂತ್ರಜಪಿತನೆ ॥೨॥

ನಕ್ಷತ್ರಮಂಟಪದಿ ಪ್ರಕಾಶಿಪ ನಕ್ಷತ್ರಮಾಲಾಧರ ।
ಕುಕ್ಷಿಭುವನಾಧ್ಯಕ್ಷಶಂಕರ ಮೋಕ್ಷದಾಯಕ ಭಕ್ತಪಾಲಕ ।
ನಕ್ಷತ್ರಾಧಿಪಮಂಡಲದೊಳಗೆ ಲಕ್ಷದೀಪದ ಬೆಳಕಿನೊಳಗಿಹ ॥೩॥

ನಂದಿವಾಹನವನೇರಿ ಆನಂದದಿಂದ ಬರುವ ಸವಾರಿ ।
ನಂದಿಧ್ವಜಕುಣಿಯುತಲೆ ಮುಂಗಡೆ ಒಂದು ಸಾವಿರ ವಾದ್ಯಘೋಷದಿ ।
ನಿಂದುಪೊಗಳುವ ಭಕ್ತತತಿ ಉಘೆ ಎಂದು ನಲಿಯುತ ನಿತ್ಯತೋಷಿಪ ॥೪॥

ಪರಮವೈಭವದಿಂದಲಿ ಮೆರೆಯುವ ಚಾಟಕಪುರಿಯೊಳು ನೆಲಸಿಹನೆ ।
ದುರಿತದೂರನೆ ಮರಣನಾಶನೆ ಕರುಣಾಸಾಗರ ಚನ್ನವೃಷಭನೆ ।
ಪರಮಪಾವನ ಮೂರ್ತಿ ಶಂಕರ ತರಳವೀರಾರಾಧ್ಯನತಪದ ॥೫॥

೨೪

ಪುಷ್ಪಾಂಜಲಿಯು ಸಮರ್ಪಿಸುವೆ । ಬಿಲ್ವಪುಷ್ಪ ಮಂಟಪದೊಳು
ರಾಜಿಪಗೆ, ಶಿವಗೆ ॥ಪ॥

ಸುರಮುನಿವಂದಿತ ಚರಣನಿಗೆ, ವರಗುಣಮಣಿಗಣ ಹಾರನಿಗೆ
ಸ್ಮರದರ್ಪ ಹರನಿಗೆ ದುರಿತ ವಿಹರಗೆ, ಗುರುಸಂಗಮೇಶನ ಚರಜಾತಗೆ,
ಶಿವಗೆ ॥೧॥

ಕಾಲಕರ್ಮವ ಗೆಲಿದ ಭವನಿಗೆ, ಶೀಲಸೋಮೇಶ್ವರ ಶೈಲಜಾಪ್ರಿಯಗೆ
ನೀಲಾಂಬೆಗಂಗಾಂಬೆ ಪತಿಸುರವಂದ್ಯಗೆ ಪಾಲಿಪ ಭಕ್ತರ ಮೋಹಪಗೆ,
ಶಿವಗೆ ॥೨॥

ಸೋಮಸೂರ್ಯಾಗ್ನಿ ತ್ರಿಲೋಚನಗೆ, ಕಾಮಿತ ಫಲಗಳನೀವನಿಗೆ
ಪ್ರೇಮದೊಳಕ್ಕೇರಿ ಪುರದೊಳು ನೆಲಸಿಹ ಸ್ವಾಮಿಶ್ರೀಗುರು ಮಡಿವಾಳೇಶಗೆ,
ಶಿವಗೆ ॥೩॥

---

೨೫

ಧೂಪದಘಟ್ಟಿ ದೀಪಬೆಳಗುವೆನು, ಲಿಂಗಯ್ಯಗೆ ಧೂಪಬೀಸು
ವೆನು ॥ಪ॥

ಆಪರಬ್ರಹ್ಮಚಿದ್ರೂಪವೆ ಸರ್ವಸ್ವರೂಪವೆಂತೆಂಬೊ ಘಟ್ಟಿ ॥೧॥
ದಶಾಂಗವನು ಹಾಲ ಹಪಮಡ್ಡಿಯೊಳು ಶೀಲ ರಸವಶೋಧಿಸಿದಘಟ್ಟಿ ॥೨॥
ಅಜಹರಿ ಅರಿಯದ ಮಝುಮಹಾಂತೇಶನ ನಿಜಪ್ರಕಾಶವನೆಮುಟ್ಟಿ ॥೩॥

---

೨೬

ಕರ್ಪೂರಜ್ಯೋತಿ ಪ್ರಕಾಶಹೋ । ನಿಜನಿಷ್ಪತಿನಿಜ ಲಿಂಗಶರಣಹೊ ।
ಮದಗಜದಂತೆ, ಲಾಲಿಸುವಬಾಲಕನಂತೆ, ಕುಜನಾಟಕದ ಮರುಳಿನಂತೆ,
ನಿಜಭೂತವಳಿದ, ದುರ್ಮದ ವಿಳಿದಾನಂದ ವಿಜಯ ಲಿಂಗಾಂಗ
ಸಂಪೂರ್ಣಹೊ ॥೧॥

ರತ್ನರತ್ನ ಜೀವದಂತೆ, ರತ್ನರತ್ನ ಪ್ರಭೆಯಂತೆ, ರತ್ನಸಿದ್ಧಾಂತ ಕಿರ
ಣದಂತೆ, ರತ್ನಸಂಜೀವನಾರತಿಗೂಡಿ, ನಲಿವಂಥ ರತ್ನಪ್ರಭಾಕರ
ದಿನಮಣಿ ಹೋ ॥೨॥

ಕರ್ಪೂರ ಕಂಭದಮೇಲೆ, ಕರ್ಪೂರ ಮಂಟಪದೊಳು, ಕರ್ಪೂರ ಜ್ಯೋತಿಯು ಬೆಳಕಿನಬೆಳಕು, ಕಪ್ಪುರಮುಪ್ಪುರ ಯೋಗದರ್ಪಣ ಸುಜ್ಞಾನ ಲಿಂಗ ಕರ್ಪೂರ ನಿರ್ವಾಣ ಪ್ರಿಯ ಬೋಳೇಶ ಹೊ ॥೩॥

---

೨೭

ರಾಗ--ಧನ್ಯಾಸಿ.

ಏಳು ಗಿರಿಜಾರಮಣ, ಏಳು ಉರಗಾಭರಣ, ಏಳು ಗಂಗಾಧರನೆ ಏಳು ಮನ್ಮಥಹರನೆ, ಏಳ್ನೂರೆಪ್ಪತ್ತಮರಗಣಂಗಳು ನಿಮ್ಮ ಓಲಗಕೆ ಬಂದರೇಳ್ಳೈ ಶಿವನೆ ॥ಪಲ್ಲ॥

ಬಸವಣ್ಣ ಚನ್ನಬಸವಣ್ಣ ಮಡಿವಾಳಯ್ಯ ಕುಶಲವಾತಿನ ಕಿನ್ನರಿಯ ಬ್ರಹ್ಮಯ್ಯ ಕೇತಯ್ಯ ವಸುಧೆಯೊಳು ಕೆಂಭಾವಿ ಭೋಗಣ್ಣನಜಗಣ್ಣ ಸತ್ಯಣ್ಣ ಮಂಚಣ್ಣನು ॥ ಮುಸುಡಿಯ ಚೌಡಯ್ಯ ಮುದನೂರು ದಾಸಿಮಯ್ಯ ಕಲಿಯ ಬ್ರಹ್ಮಯ್ಯ ಹಸಿಯ ಮಸ್ತಕದ ಮಾಚಯ್ಯಗಳು ಓಲಗಕೆ ಶಶಿಧರನೆ ಬಂದರೇಳ್ಳೈ ಶಿವನೆ ॥೧॥

ಸೊನ್ನಲಿಗೆಯ ಸಿದ್ಧ ಮುದ್ದುಗೊಂಡನು ಪಂಡಿತಾರಾಧ್ಯ ನಿಮ್ಮ ಮೆಚ್ಚಿನ ಭಕ್ತ ಮೋಳಿಗೆಯ ಮಾರಯ್ಯ ಸನ್ನುತದ ಹಡದಪ್ಪಣ್ಣ ಸುರಗಿಯ ಚೌಡಯ್ಯ ಕನ್ನದ ಬ್ರಹ್ಮಯ್ಯನು ॥ ಚನ್ನಯ್ಯ ಚಾರಮನು ನಂಬಿಯಣ್ಣ ಕಲಿಭೀಮ ಭಿನ್ನವಿಲ್ಲದ ಭಕ್ತನುಲಿಯುಚಂದಯ್ಯಗಳು ಹೆಣನ್ನಯ್ಯಗಳು ಕರಿಕಾಲ ಕಲ್ಲಯ್ಯ ಬಂದನು ಪನ್ನಗಧರನೆ ಏಳ್ಳೈ ಶಿವನೆ॥

ಶಂಕರದಾಸಿಮಯ್ಯ ನಿಜಲಿಂಗಚಿಕ್ಕಯ್ಯ ಸುಂಕದ ಬಂಕಯ್ಯ ಯಲೇಶ್ವರದ ಕೇತಯ್ಯ। ಪಂಕಜಮುಖಿ ಮಹಾದೇವಿ ಮುಕ್ತಾಯಕ್ಕ ಸತ್ಯಕ್ಕೆ ಚೋಳಕ್ಕನು। ಕೊಂಕುಗುರುಳಿನ ನಂಬಿಯಕ್ಕ ಬಂತಲದೇವಿ ಶಂಕಿಣಿಯುಪರವಿನಾಚಿಯರುಗೊಗ್ಗವ್ವೆ ಶಿವಲೆಂಕ ಮಂಚಣ್ಣಗಳು ಮೊದಲಾದ ಶಿವಶರಣರು ಶಂಕರನೆ ಬಂದರೇಳ್ಳೈ ಶಿವನೆ ॥೩॥

---

## ೨೮

### ರಾಗ—ಭೈರವಿ

ಎಂತು ಮರೆಯಲಿ ರಮಣಿ, ಮಾಡಿದುಪಕಾರವನು
ಕಂತುರಿಪು ಸಂಗಮೇಶ್ವರನೆ ಒಲಿದನೆಮಗೆ ॥ಪ॥

ಚಂಡಕರ ಶಶಿಶಿಖಿ ಮಂಡಲಂಗಳ ನಡುವೆ
ಮಂಡಲದೆ ಶಿರಸ್ಥಳದಿ ಎಡೆಸ್ಥಾನದಿ
ತಂಡತಂಡದಿ ವಸುಧೆಪತಿಗಳಿರುವ ಪರಿಯ
ಕಂಡೆನಿದನೇನೆಂಬೆ ಕಮಲದಳನೇತ್ರೆ ॥೧॥

ಎಂಟು ಹದಿನಾರು ಮೂವತ್ತೆರಡು ದಳಗಳಲಿ
ಎಂಟು ಶಕ್ತಿಯರು ಹದಿನಾರು ಗಣವರರು
ಎಂಟು ವಿದ್ಯೇಶ್ವರರು ಎಂಟು ದಿಕ್ಪಾಲಕರು
ಎಂಟು ವಸುಗಳ ಪರಿಯಂ ಕಂಡೆನಿದೆ ಕಾಂತೆ ॥೨॥

ಬಿಂದು ನಾದಾತ್ಮವಿದ್ಯಾ ವರ್ಣದಳಗಳಲಿ
ಸಂದೊಂದಿ ಕೇಶ್ವರಿ ಗಣಾನಿ ಉನ್ಮನೆಯು
ಮುಂದೆ ಓಂಕಾರಿಯೆಂಬುಮೆಯೊಡನೆ
ನಿಂದು ಶಾಂಭವದಿರವ ತೋರಿದರೆ ಸಖಿಯೆ ॥೩॥

---

## ೨೯

ಭುಜಗ ಭೂಷಣನಿಗೆ ನಮೋ ನಮೋ, ಶ್ರೀಗಜಮುಖ ತಾತಗೆ
ನಮೋ ನಮೋ ॥ಪ॥

ಹರಿವಿಧಿವಂದ್ಯಗೆ ನಮೋ ನಮೋ, ಸಿತ ಗಿರಿಸುತೆಯರಸಗೆ ನಮೋ
ನಮೋ। ಕರಿಕೃತ್ತಿವಾಸಗೆ ನಮೋ ನಮೋ ಇಷ್ಟ ದುರಿತ ವಿದೂರಗೆ
ನಮೋ ನಮೋ ॥೧॥

ನೀಲಗ್ರೀವಗೆ ನಮೋ ನಮೋ ಕಾಮ, ಕಾಲಸಂಹರನಿಗೆ ನಮೋ
ನಮೋ
ಭೂಲೋಕದೊಡೆಯನಿಗೆ ನಮೋ ನಮೋ, ಲೋಕಪಾಲಿಪಗೆ ನಮೋ
ನಮೋ ॥೨॥

ಗಂಗಾಧರನಿಗೆ ನಮೋ ನಮೋ ತ್ರ್ಯಂಗತುರಂಗಗೆ ನಮೋ ನಮೋ ಮಂಗಳಮೂರ್ತಿಗೆ ನಮೋ ನಮೋ, ಇಷ್ಟಲಿಂಗ ದೇವಗೆ ನಮೋ ನಮೋ ॥೩॥

---

೧೦

ಯನ್ನ ರಕ್ಷಿಸ ಬಂದ ಚನ್ನಶ್ರೀಗುರುಪಾದ
ಮುನ್ನೊಂದು ಜನ್ಮದೊಳು ಪಡೆದ ಪಾದ ॥ಪ॥

ಹರಿನೇತ್ರಕಮಲವನು ಧರಿಸಿ ಚರಿಸಿದ ಪಾದ ವಾರಿಜೋದ್ಭವನಿಗೆ ವರವಿತ್ತ ಪಾದ । ಸುರಮುನಿಗಳು ಬಿಡದೆ ಪೂಜಿಸುವ ಶ್ರೀಪಾದ ಪರಮ ಪರತತ್ವ ಭರಿತಪಾದ ॥೧॥

ಮಂದರಗಿರಿಯಲ್ಲಿ ಮುಹೂರ್ತ ಮಾಡಿದ ಪಾದ ಅಂಧಕಾಸುರನ ದೆಯ ತುಳಿದಪಾದ । ನಂದಿಯೇರಿದಪಾದ ಇಂದುಶೇಖರಪಾದ ಸಿಂಧುಬ ಲ್ಲಾಳನ ವಂದನೆಯಪಾದ ॥೨॥

ದುರುಳ ರಾವಣನ ಶಿರ ಧರೆಗೊತ್ತಿದಪಾದ ಯನ್ನ ಕುರವನು ಸೂರೆಗೊಂಡಪಾದ । ಸಿರಿಯಾಳನಣುಗನ ಕೊರಳಕೊಯಿಸಿದಪಾದ ಕುಂಬಾ ರನಗದಿಕಿಗೆ ಕುಣಿದಪಾದ ॥೩॥

ಬಸವಾದಿ ಪ್ರಮಥರು ಹರುಷದಾಳಿದಪಾದ ದಶದಿಕ್ಕಿನೊಳಗೆ ಹಸ ನ್ನಲ್ಲಪಾದ । ದಸರಯ್ಯ ದಾಸಯ್ಯ ಬಿಡದ ಮೋಹದಪಾದ ವಸುಧೆಯೊ ಳಗೀಪಾದ ಅರಸುಪಾದ ॥೪॥

ನನ್ನಯ್ಯ ನಾದಯ್ಯ ಸ್ಮರಣೆಯೊಳಗಿಹಪಾದ ಹೊನ್ನಿತಂದೆಯು ನಂಬಿದಂಥ ಪಾದ ಚನ್ನಯ್ಯ ಕಂಸಗೆ ಮುಕ್ತಿದೋರಿದ ಪಾದ ಇನ್ನುಳಿದ ಗಣಕೆಲ್ಲ ಐಕ್ಯಪಾದ ॥೫॥

ನೀಲಲೋಚನೆಯು ಗಂಗಾಬೆ ನುತಿಸಿದ ಪಾದ ಬಾಲೆ ಅಮ್ಮವ್ವೆಯ ಮಗನ ಪಾದ ಮೇಲಾದ ಶರಣರ ಮನಕೆ ಮೆಚ್ಚಿದ ಪಾದ ನಾಲ್ಕು ಸಾದಾಖ್ಯ ಮೀರಿದಪಾದ ॥೬॥

ಅಷ್ಟವರಣದ ಪಾದಶ್ರೀಷ್ಮಸದ್ಗುರುಪಾದ, ಮುಟ್ಟಿಎರಗುವದು ಜಂಗಮಪಾದ । ಅಷ್ಟವರಣದ ಪಾದ ಷಟ್‌ಸ್ಥಲದ ಶ್ರೀಪಾದ, ನಿಷ್ಠೆವಂತರ ಪಂಚಪರುಷಪಾದ ॥೭॥

ಪನ್ನೀರು ಗಂಧಾಕ್ಷತೆಯು ಪರಿಮಳದಪಾದ, ಪರಿಪರಿಯ ಪುಷ್ಪ ಸಂಭ್ರಮದ ಪಾದ, ದೀಪ ಬೆಳಗುವ ಪಾದ ಉಪಕರಣ ಸ್ತ್ರೋತ್ರ ಒಪ್ಪಿರ್ದಪಾದ ॥೮॥

ನಾದ ಬಿಂದು ಕಳೆ ಅಧಿಕಮೋಹದ ಪಾದ ವೇದ ಭೇದಕ್ಕೆ ಸೂತ್ರ ವಡೆದ ಪಾದ, ಸಾಧಿಸುತ ಲಿಂಗಾಂಗ ತೃಪ್ತಿ ಅರುಹಿದ ಪಾದ, ಸದಮಲ ಜ್ಞಾನದೊಳು ಪಡೆದ ಪಾದ ॥೯॥

ಕರುಣ ಪ್ರಸಾದವನು ರುಚಿಯುಗೊಂಬುವ ಪಾದ, ವರವಸ್ತ್ರದಾಭರಣ ಸಂಪೂರ್ಣ ಪಾದ ನಿರುತದಿಂದಲಿ ವೀಕ್ಷ್ಯ ಸವಿಗೊಂಬ ಶ್ರೀಪಾದ ಹರುಷಾಬ್ಧಿಯೆಂಬ ಮನವಮುಳುಗಿದಂಥ ಪಾದ ॥೧೦॥

ಈ ಪಾದದರ್ಥವನು ಹೇಳಿ ಕೇಳಿದವರ್ಗೆ ಬೇಡಿದಿಷ್ಟಾರ್ಥವಂ ದೊರೆಕೊಂಬುದು ಪತಿಯೆಂದು ನಂಬಿದವರ್ಗೆ ಮಹದೇವ ತನ್ನೊಳಗೆ ಏಕಾರ್ಥವು ॥೧೧॥

---

೩೧

ಮಂಗಳಾರತಿಯೆತ್ತಿರಂಗನೆಯರೆಲ್ಲ ಸಂಗನಬಸವಣ್ಣನಿಗೆ ಚೆನ್ನನಿಗೆ ॥ಪಲ್ಲ॥

ಓದುವ ಮಠದಿ ಮೊದಲಾಗಿ ಪವಾಡವ ಮೇಧಿನಿಯೊಳಗೆ ಹೋದವಗೆ ॥೧॥

ಗಂಗೆಯು ಧರಿಸುತ ಲಿಂಗವ ತೋರಿದ ಸಂಗಯ್ಯನೊಳಗಾದವಗೆ ಹೋದವಗೆ ॥೨॥

ಅಂಗನೆಯರಿಗೆ ಲಿಂಗವ ಧರಿಸುತ ಜಂಗಮರೂಪುಮಾಡಿದಗೆ ನೀಡಿದವಗೆ ॥೩॥

ಕರವಮುಗಿಯೆ ಅಲ್ಲಿ ಮೆರೆವ ಗದ್ದುಗೆಯನ್ನು ಊರುಹಿಬಿಟ್ಟ ದಿಟ್ಟನಿಗೆ ಶ್ರೇಷ್ಠನಿಗೆ ॥೪॥

ಬರೆದ ಲಿಪಿಯನೋದಿ ಮೆರೆವ ದ್ರವ್ಯವ ತಾನು ದೊರೆಯು ಬಿಜ್ಜಳಗೆ ತೋರಿದಗೆ ಸಾರಿದವಗೆ ॥೫॥

ಲಕ್ಷದಮೇಲೆ ತೊಂಭತ್ತಾರುಸಾವಿರ ನಿತ್ಯ ಜಂಗಮಕಿಕ್ಕಿದವಗೆ ಸಿಕ್ಕದವಗೆ ॥೬॥

ಕಲ್ಯಾಣ ಪಟ್ಟಣವಲ್ಲಿ ಪವಾಡನಿಲ್ಲದೆ ಗೆಲಿದಂಥವಗೆ ಮಹಾಂತನಿಗೆ ॥೭॥

ಮುಕ್ಕಣ್ಣ ಪುತ್ರನ ಬೆನ್ನೊಳು ಹೊತ್ತು ಚರಿಸುವ ಅಕ್ಕ ನಾಗಲೆ ಅಣ್ಣನಿಗೆ ತಮ್ಮನಿಗೆ ॥೮॥

ಕರಿಯಲೆ ಮಡುಪಿಗೋಸ್ಕರ ರೇಚಣ್ಣನ ಧರೆಯೊಳು ಬಿಟ್ಟು ಹೋದವಗೆ ಹೋದವಗೆ ॥೯॥

ಹಾಲುತರುತ ನರಿ ಕಾಲು ಜಾರಲು ಅಲ್ಲಿ ಬಾಲೆ ಕೊಡ ಪಿಡಿದವಗೆ ಹಿಡಿದವಗೆ ॥೧೦॥

ಧರೆಯೊಳು ಗುಬ್ಬಿಯು ಪುರವಾಸವಾಗಿರ್ಪ ಗುರುಚನ್ನಬಸವಣ್ಣನಿಗೆ ಚಿಣ್ಣನಿಗೆ ॥೧೧॥

---

೩೨

ಎನ್ನ ಗುಣವ ನೋಡಬೇಡ ಲಿಂಗಯ್ಯ
ನಾನು ನಿಮ್ಮ ಪಾದ ನಂಬಿದವನು ಲಿಂಗಯ್ಯ ॥ಪ॥

ಆರೆ ಆರೆ ಆಗಲಾರೆ ಲಿಂಗಯ್ಯ ಮಾರಗೆಡದೆ ಮನ್ನಿಸೆನ್ನ ಲಿಂಗಯ್ಯ ॥೧॥
ಹಿಂದೆ ಭವ ಭವದಲ್ಲಿ ಲಿಂಗಯ್ಯ ನಾನು ಬಂದು ಬಂದು ನರಳುತಿಹೆನು ಲಿಂಗಯ್ಯ ॥೨॥

ಮುಂದೆ ಭವದಿ ಬಾರದಂತೆ ಲಿಂಗಯ್ಯ ನಿಮ್ಮ ಕಂದನೆಂದು ರಕ್ಷಿಸೆನ್ನ ಲಿಂಗಯ್ಯ ॥೩॥

ಗಿಳಿಯು ಓದಿ ತನ್ನ ಮಲದ ಲಿಂಗಯ್ಯ ತಿಂದು ತಿಂದು ಓಡಿ ನಲಿದಾಡುವಂತೆ ಲಿಂಗಯ್ಯ ॥೪॥

ಹಲವನೋದಿ ಎನ್ನ ಮನವು ಲಿಂಗಯ್ಯ ತ್ರಿವಿಧಮಲಕೆ ಮೆಚ್ಚಿ ಬೀಳುತೈತೆ ಲಿಂಗಯ್ಯ ॥೫॥

ಮರ್ತ್ಯಲೋಕದೊಳಗೆ ಹುಟ್ಟಿ ಲಿಂಗಯ್ಯ ನಾನು ವ್ಯರ್ಥವಾಗಿ ಹೋಗುತಿದ್ದೆ ಲಿಂಗಯ್ಯ ॥೬॥

ಸತ್ತುಹುಟ್ಟುವುದ ಬಿಡಿಸೊ ಲಿಂಗಯ್ಯ ನೀಡಿ ನಿತ್ಯವೆಂದು ಎನಿಸೊ ಲಿಂಗಯ್ಯಾ ॥೭॥

ಎಷ್ಟು ಪರಿಯಲಿ ಕಸುವ ಹೋರಿದ ಲಿಂಗಯ್ಯ ಇಂದು ನಷ್ಟವಾಗಿ
ಹೋಗುತೈತೆ ಲಿಂಗಯ್ಯ ||೮||

ಕೆಟ್ಟವಳೆಂದೆನಿಸಬೇಡ ಲಿಂಗಯ್ಯ ಸ್ವಾಮಿಪಟ್ಟದ ಕೈಲಾಸ ಪ್ರಭುವೆ
ಲಿಂಗಯ್ಯ ||೯

---

೩೩

ಆರು ಬಲ್ಲರಯ್ಯ ಸ್ವಾಮಿ ನಿಮ್ಮ ಮಹಿಮೆಗಳ ಶಿವನೆ
ಮೂರು ಲೋಕದ ಕರ್ತೃ ನೀನೆಂದಾಡೊ ಆಟಗಳ ಶಿವನೆ ||ಪ||

ನಂಬಿಗೊಲಿದು ಹಡಪವ ಹೊತ್ತು ಕುಂಟಣಿಯಾಗಿದ್ದೆ ಶಿವನೆ ।
ಕುಂಬಾರನ ಮಡಕೆಯು ಗದುಕಿಗೆ ಕುಣಿಯುತ ನೀ ಬಂದೆ ಶಿವನೆ ||
ರಂಭೆಯೋರ್ವಳ ಸ್ಥಳದೊಳು ಮೂಡಿ ಪೂಜೆಗೊಳುತಿದ್ದೆ ಶಿವನೆ ।
ಕುಂಭಿಣಿಯೊಳು ಗಣಪತಿರಾಯನ ಬದುಕ ನೀ ಕದ್ದೆ ಶಿವನೆ ||೧||

ಕಾಳಿದಾಸಂಗೊಲಿದು ಮೇಲಣ ಕಣ್ಣ ನೀ ಕೊಟ್ಟೆ ಶಿವನೆ
ಮೋಳಿಗೈಯ್ಯನ ಕಟ್ಟಿಗೆ ಹೊರೆ ಸುವರ್ಣವ ಮಾಡಿದೆ ಶಿವನೆ ||
ಚೋಳ ಅಕ್ಕ ಕಳುಹಿಸಿದಂಥ ತಳಿಗೆಯ ಬಚ್ಚಿಟ್ಟೆ ಶಿವನೆ ||೨||

ಕುರಿಯ ಹಿಕ್ಕೆಲಿ ಬೆರೆದ ಕುರುಬನ ಕೈಲಾಸಕೊಯ್ದೆ ಶಿವನೆ
ಹರಿಯ ಮಗನ ಫಣೆಗಣ್ಣಿಂದ ಉರುಹಿ ನೀ ಸುಟ್ಟೆ ಶಿವನೆ ||
ಧರೆಯ ಮೇಲೆ ಭಿಕ್ಷವ ಬೇಡುತ ತಿರುಗುತ ನೀ ಬಂದೆ ಶಿವನೆ
ಕರುವ ಕಾಯುತ ತುರುವೆ ಗುಡ್ಡದ ನಡುವೆ ನೀ ನಿಂದೆ ಶಿವನೆ ||೩||

---

೩೪

ಬೆಳಗಿನ್ನೆಲ್ಲಿಹುದೊ ಲಿಂಗದ ಸುಳುಹಿನ್ನೆಲ್ಲಿಹುದೊ । ಬೆಳಗಿನ ಸುಳು
ಹನು ತಿಳಿಯದೆ ಬರಿದೆ ಆಡಿಕೊಂಬ ಕುರಿ ಮನುಜರಿಗೆ ||ಪ||

ಮಾತಿನ ಬಣಬೆಯ ಮುಂದಿಟ್ಟುಕೊಂಡು ನೀತಿಶಾಸ್ತ್ರ ಓದುತ
ಕೇಳುತ ಆತ್ಮದೊಳಗಣ ಅರುಹನು ತಿಳಿಯದೆ ಮೂತ್ರದ ಕುಳಿಯೊಳು
ಮುಳುಗಾಡುವರಿಗೆ ||೧||

ತನ್ನೊಳಗಿರೆ ಗುರುಲಿಂಗಜಂಗಮ ಕಣ್ಣಲಿ ನೋಡುತ ಕಡೆಯಲ್ಲ ರಸುತ ಹೊನ್ನು ಹೆಣ್ಣು ಮಣ್ಣರೊಳು ಸಿಲುಕಿ ಸಣ್ಣನಾಗಿ ಬಂದು ಮುಳುಗಾಡುವರಿಗೆ ॥೨॥

ಆರು ಓದಿದೊಡೇನು ಆರುವತ್ತಾರ ಕೇಳಿದೊಡೇನು ಕಾಯುವ ಕಳೆ ಯದೆ। ಕ್ರೋಧವ ಮರೆಯದೆ ಹೋರಾಡಿ ಮುಳುಗುವ ಹೊಲಸ ತೊರೆ ಯದೆ ॥೩॥

ಕಾಯದೊಳಿರುವ ಮಾಯದ ಲಿಂಗವ ಆದರಾಯನನರಿಯದೆ ಆದ ಮರೆತು ತಾವು। ಬಾಯಿ ಕೊಬ್ಬಿನಿಂದ ಒಂದೊಂದ ಹೇಳುವ ಮಾಯೆಯ ಮೋಹದಿ ಮುಳುಗಾಡುವರಿಗೆ ॥೪॥

ಅಂಗದ ಹೊಲಬನು ಲಿಂಗಕೆ ತೋರಿಸಿ ಲಿಂಗದ ಹೊಲಬಿನಲಾ ಡುತಲಿ ಕಣ್ಗಳ ಬೆಳಗಿನ ಬೆಳಗಿತ್ತು ಸಂಗನಬಸವನಿಗರುಹಿಲ್ಲದೆ ॥೫॥

---

೩೫

ಶ್ರೀಗುರುದೇವಗೆ ಮಂಗಳಂ ಗಣಸಾಗರ ಪೂರ್ಣ ಶಶಾಂಕಗೆ ಮಂಗಳಂ ॥ಪ॥

ಕಮಲ ಕಮಲ ಪಕ್ಷಿನೇತ್ರಗೆ ವರಕಮಲನಾಭನೇತ್ರ ಪಾದಗೆ ॥೧॥

ಮೂರು ಆಲಯದೊಳಗೆ ತೋರುವಗೆ ಭಕ್ತಪಾರಿಜಾತಗೆ ಪಾಪ ಲೋಪಗೆ ॥೨॥

ಕಂತುಹರನ ಭಕ್ತರಂತಹವ ತಿಳಿದ ಸ್ವತಂತ್ರ ಗವಿಯ ಸಿದ್ಧಲಿಂ ಗಗೆ ॥೩॥

---

# ಮಲ್ಲೇನ ಹಳ್ಳಿ ಚನ್ನ ಬಸವ ದೇವರ

ಮತ್ತು

# ಹೊನ್ನುಡಿಕೆ ಗಂಗಾಧರ ಸ್ವಾಮಿಗಳ ಪದ್ಯಗಳು.

ಚನ್ನಬಸವದೇವರು ತುಮಕೂರು ಜಿಲ್ಲಾ ಗುಬ್ಬೀ ತಾಲೂಕು ಮಲ್ಲೇನಹಳ್ಳಿ ಗ್ರಾಮದಲ್ಲಿ ಜನ್ಮತಾಳಿ, ಲೌಕಿಕ ಪಾರಮಾರ್ಥಿಕ ಚತುರರಾದ ಶರಣರೂ, ಶಿವಾನುಭವಿಗಳೂ ಆಗಿದ್ದರು. ಇವರು ಶ್ರೀ ಕರಿವೃಷಭೇಂದ್ರ ಸ್ವಾಮಿಗಳ ಸಮಕಾಲೀನರು ಮತ್ತು ಶ್ರೀಗಳ ಅನುಗ್ರಹದಿಂದ ಕವಿತಾಶಕ್ತಿಯನ್ನು ಪಡೆದು ಈ ಪದ್ಯಗಳನ್ನು ಹಾಡಿದ್ದಾರೆ. ಇಲ್ಲಿನವರೆಗೆ ಸಿಕ್ಕಿದ ಪದ್ಯಗಳನ್ನೆಲ್ಲ ಸಂಗ್ರಹಿಸಿದ್ದಾಗಿದೆ. ಇವರು ತಮ್ಮ ಪ್ರತಿಪದ್ಯದ ಅಂತ್ಯಪಾದದಲ್ಲಿ ತಮ್ಮ ಜನ್ಮಸ್ಥಳವಾದ "ಮಲ್ಲನಪುರ" ದ ಮತ್ತು ತಮ್ಮ ಗುರುವಾದ "ಸೋಮೆಕಟ್ಟೆ" ಶ್ರೀಗಳ ಅಂಕಿತವನ್ನಿಟ್ಟು ರಚಿಸಿದ್ದಾರೆ. ಪದ್ಯಗಳು ಬಹಳ ಸ್ಫೂರ್ತಿದಾಯಕವಾದುವೂ ಶಿವಾನುಭವಜನ್ಯವಾದುವೂ ಆಗಿವೆಯೆಂಬುದು ಅವರ ಈ ಪದ್ಯಗಳನ್ನು ಓದುವುದರಿಂದ ಮನವರಿಕೆಯಾಗದಿರಲಾರದು.

ಗಂಗಾಧರಸ್ವಾಮಿಗಳು ಗುಬ್ಬಿ ತಾಲೂಕು ನಿಟ್ಟೂರು ಗ್ರಾಮದಲ್ಲಿ ಚಿಕ್ಕಣ್ಣನವರು ಮತ್ತು ಭದ್ರಮ್ಮನವರು ಇವರ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೂ ತುಮಕೂರು ಜಿಲ್ಲಾ ತುಮಕೂರು ತಾಲೂಕು ಹೊನ್ನುಡಿಕೆ ಗ್ರಾಮದಲ್ಲಿ ವಾಸವಾಗಿದ್ದರು. ಚಿಕ್ಕಂದಿನಿಂದಲೂ ಬಹಳಕಾಲ ಗುರುಕುಲವಾಸಮಾಡಿ ವೇದಾಂತ ಸಿದ್ಧಾಂತ ಶಿವಾನುಭವ ಶಾಸ್ತ್ರಗಳನ್ನು ಅಭ್ಯಾಸಮಾಡಿದರು. ಇವರು ಶ್ರೀಗಳ ಸಮಕಾಲೀನರು; ಶ್ರೀಗಳಿಂದ ಇವರಿಗೆ "ಪೂರ್ಣಾನುಗ್ರಹ" ಪ್ರಾಪ್ತಿಯಾಗಿತ್ತು. ಇವರು ಕೆಲವು ಕಾಲ ಶಂಭುಲಿಂಗನ ಬೆಟ್ಟದಲ್ಲಿ ತಪಶ್ಚರ್ಯೆಯಿಂದಿದ್ದರು. ಇವರು ಮಹಾ ತತ್ವವೇತ್ತರೂ, ತಾರ್ಕಿಕರೂ, ಬೋಧಾಕುಶಲರೂ ಆಗಿದ್ದರು. ತಮ್ಮ ಉಪದೇಶಾಮೃತದಿಂದ ಅನೇಕ ಶಿಷ್ಯರನ್ನುದ್ಧಾರಮಾಡಿ ಕ್ರಿ. ಶ. ೧೯೧೫ ನೇ ರಾಕ್ಷಸ ಸಂವತ್ಸರದಲ್ಲಿ ಲಿಂಗೈಕ್ಯರಾದರು. ಇವರ ಪದ್ಯಗಳು ಅನುಭವವನ್ನು ಹೊರಸೂಸುತ್ತವೆ.

ನನ್ನ ತೀರ್ಥರೂಪರಾದ ಯಜಮಾನ್ ರುದ್ರಯ್ಯ ಹೊನ್ನುಡಿಕೆ ಇವರು ಸಂಗ್ರಹಿಸಿಟ್ಟಿದ್ದ ಪ್ರತಿ ೧, ಶ್ರೀ ಮಾಗಡಿ ಸೋಮೇಕಟ್ಟೆ ಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ರುದ್ರಮುನಿಸ್ವಾಮಿಗಳವರು ಕೃಪೆಮಾಡಿ ಕಳುಹಿಸಿಕೊಟ್ಟ ಪ್ರತಿ ೧, ಮತ್ತು ಅಲ್ಲಲ್ಲಿ ಶ್ರೀಗಳ ಶಿಷ್ಯರು ಹಾಡುತ್ತಿದ್ದ ಪದ್ಯಗಳನ್ನು ಸಂಗ್ರಹಿಸಿ ಬರೆದುಕೊಂಡದ್ದು, ಇವುಗಳ ಆಧಾರದ ಮೇಲೆ ಈ ಪದ್ಯಗಳನ್ನು ಸಿದ್ಧಮಾಡಲಾಗಿದೆ. ವಿಪುಲವಾಗಿದ್ದ ಕೈ ತಪ್ಪುಗಳನ್ನು ಯಥಾಮತಿ ತಿದ್ದಲಾಗಿದೆ. ದೋಷಗಳು ನಿಶ್ಶೇಷವಾಗಿ ಹೋಗಿವೆ ಎಂದು ನನ್ನ ನಂಬುಗೆ ಇಲ್ಲ. ಪ್ರಾಜ್ಞರು ಕೇವಲ ಗುಣಗ್ರಹಣವನ್ನೇ ಮಾಡಿ ಪ್ರಮಾದಗಳನ್ನು ತೋರಿಸಿ ಕೊಟ್ಟರೆ ಮುಂದಾದರೂ ಪೂರ್ತಿಯಾಗಿ ತಿದ್ದಲಾದೀತೆಂದು ಆಶೆ.

ಯುವಸಂವತ್ಸರದ ಯುಗಾದಿ
**ತುಮಕೂರು**

ಇತಿ ಶಿವಾನುಭವಿಗಳ ಪಾದಸೇವಕ,
**ಹೊ. ರು. ಮಹಾಂತಯ್ಯ.**

### ನಾದ ನಾಮಕ್ರಿಯೆ ಆದಿತಾಳ.

ಇಂತು ಪೇಳುವುದೆನ್ನಳವೆ ಗುರುಕರುಣದ ಬಲವೆ ॥ಪಲ್ಲ॥

ಮೊದಲಾಧಾರವೆ ಅದು ಭೂಧರವೆ। ಪದುಮದ ಚಂದಚೌದಳದಂ
ದವೆ। ಅದರಕ್ಷರವೆ "ವಾದಿಸಾಂತ" ದುವೆ ಇದು ತಳ ಧೌತ ವರ್ಣದ ಇರವೆ।
ಸಿದ್ಧಿವಿನಾಯಕನಿದ್ದಪನಿಜವೆ । ಸಾದರವಲ್ಲಿ ಸುಸ್ವರಮಂತ್ರಂಗಳ ।
ಮೋದದಿ ನೂರಾರತಿಬಲಗೊಂಡಿವೆ। ಬಾಧಕ ಹರಿಪನತಾರಲ್ಲಿಹುದು।
ಬೋಧದ ಪೆಣ್ಬಾಂಬಿಯು ಸ್ವರವಹುದು। ಆದಿಯ ಆಚಾರದ ಲಿಂಗಹುದು।
ಸದ್ಯೋಜಾತದ। ಮುಖವದು ಆದುದು। ಇದ್ದಳು ಕ್ರಿಯಾಶಕ್ತಿ ಒಲವಿಂದ।
ಬದ್ಧವಾದ ಪೀತದು ಬಹು ಚಂದ। ಸಿದ್ಧ ಸುಚಿತ್ತದ ಹಸ್ತಗಳಿಂದದು।
ಶುದ್ಧನಿವೃತ್ತಿ ಕಲೆ ಋಗ್ವೇದ ನಿರ್ಧರವನಾದಿ ಸಂಜ್ಞೆಯು ಘ್ರಾಣದ। ಸದ್ಗು
ಣಗಂಧದ ವಿಷಯಮುಖದ। ಚಿದ್ಘನತಾರಕಾಕೃತಿರೂಪಿಂದದದ। ಮುದ್ಗುರು
ಭಕ್ತಾಂಗದ ಸೊಬಗೆಂದಿದ। ನಿರ್ಧರ ಬಿಡದಲೆ ತಿಳಿಮೊದಲೆಂದ ॥೧॥

ಸಲಿಲಕಳೇವರದನುವಿನಗತಿಯೋಳ್। ಸಲೆಸ್ವಾಧಿಷ್ಠಾನ ಜಲಜದು
ಪಸುರೋಳ್। ದಳ"ಬಾದಿಲಾಂತ"ಕ್ಷರನಿಲಯದಿ ಬ್ರಹ್ಮಷಟ್ಸಾಸಿರವ। ಪುಳ
ಕದ ಮಂತ್ರ ಬಲಗೊಂಡೆಸೆಯಲ್ಕಲ್ಲಿ ಮಕಾರವು ರತ್ನದ ಕಾಂತಿಯೋಳ್ಗ
ಲ್ಲಿಸುವ ವೀಣಾಸ್ವರ ಗುರು ಲಿಂಗೆಲ್ವಲಿ ವಾಮದೇವಾಶ್ಚಪ್ರತಿಷ್ಠದಾತಲೆ।
ಸಲೆನಾಮದಿಧವಳಾಕಾರ। ಲಲಿತದಿ ಒಪ್ಪುವ ಜ್ಞಾನ ಶಕ್ತಿ ಕೇಳೊಲವಿಂ
ಸುಬುದ್ಧಿಹಸ್ತಂಗಳೊಳು ಸುಲಲಿತ ರಸದ್ರವ್ಯವ ಜಿಹ್ವೆಗೆಲವಿಂ ನೈಷ್ಠಿಕ
ಭಕ್ತಿಲಿ ನೀಡುತ ಸೊಲ್ಲಿಸುತಲ್ಲಿ ಯಜುರ್ವೇದವ ತಾ ನಿಲ್ಲುತ ಲಿಂಗಕ್ಷೇತ್ರ
ಸಂಜ್ಞೆಯಲಿ ಎಲ್ಲ ಕರ್ತೃಸಾದಾಖ್ಯದಿ ಬೆರೆಯುತ ಬಲ್ಲಿವರಿಂ ತಿಳಿದಂಡ
ಕಾಕೃತಿಯಿಂತೆಲ್ಲ ಮಹೇಶಾಂಗದ ಪರಿ ತಿಳಿ ನೀನೆಲ್ಲರಿಯಲು ಅಘನಿಲ್ಲದು
ಇಂತಿದೆಲ್ಲವನೊರೆದನು ಗುರುದಯ ಬಂದು ॥೨॥

ಮಣಿಪೂರಕದೊಳು ಅಗ್ನಿಯ ಕಾಯ। ಎಣಿಸಲ್ ದಶದಳಪದ್ಮದ
ಗೇಯು। ಮಣಿನೀಲದ ಮಿಕ್ಕು ಮಾಯದುಗೊಪ್ಪಿ। ಗಣಿಸಲು "ಡಾದಿ
ಪಾಂತ್ಯ" ಕ್ಷರದಾಯ। ಫಣಿಶಯನನವಾಸಕ್ಕಿದು ನ್ಯಾಯ। ಕ್ಷಣ ಭಜಿಸುವ
ಷಟ್ಸಾವಿರ ಮಂತ್ರ। ಬಣಗ್ಗುರಿಪ ಇಕಾರ ಸ್ವತಂತ್ರ। ಗಣಗಣ ಗಂಟೆಯ
ನಾದದ ಮಾಂತ್ರ। ತೃಣಜಗವೆಂಬ ಅಘೋರಾನನದ। ತ್ರಿಣಯನಂತೆ
ಶಿವಲಿಂಗ ಶರೀರ। ದಾರುಣ ಕಾಂತಿಯೊಳಿಚ್ಛೆಯು ಶಕ್ತಿಸದಾ। ಘೃಣಿ
ಯಾಗುತ ವಿದ್ಯಾಕಲೆಮುದದ। ಶೋಣಿತ ವರ್ಣಾಂಬರ ಮುಖಕಲ್ಲಿ।

ಮಾಣದೆ ನಿರಹಂಭಾವ ಕರದಲ್ಲಿ। ಪೂಣಯುವಿರದೆ ಸ್ವರೂಪಿಕ್ಯಕಲಿ। ಜಾಣತ್ವದಿ ಸಾಮುಪತಿಸುತಲಿ। ಕೇಣಿಗೊಂಡು ಕುಂಡಲಾಕೃತಿಯಿಂತಿದು। ತ್ರಾಣವು ಪ್ರಸಾದಸ್ಥಲವೆಂತಹುದು। ಕಾಣದನರಂದ್ಯಾ ಕುಸುರುವುದು. ನೇಣಾಷ್ಟುಳಿದರೆ ಇದು ತಿಳಿಯುವುದು ॥೩॥

ವಾಯುವೆ ಭೂತ ಮಾಂಜಿಷ್ಟವರ್ಣದ। ರಾಯತ ಷಟ್ಕೋಣನಾ ಹತ ಚಕ್ರದ। ಛಾಯ ಕುಂಕುಮದಳ ಪನ್ನೆರಡದ। ಶ್ರೇಯದ "ಕಾದಿ ಟಾಂತ್ಯ" ಕ್ಷರ ಮಧ್ಯದ। ಲಾಯದಿ ಸಾವಿರ ಅಜಪಮಂತ್ರದ; ಸ್ತ್ರಾಯ ವಿಡಿದು ಶ್ರೀರುದ್ರನು ಒಪ್ಪಿದ। ಕಾಯರಹಿತವಕಾರಲ್ಲಿಹುದು । ಜೇಯ ಶಬ್ದ ಭೇರಿಯು ಬಿಳಿರೂಪದ ಮಾಯವಿರದೆ ಜಂಗಮಲಿಂಗೊಪ್ಪಿದ ನಿಯತ ಕೆಂಪು ತತ್ಪುರುಷಾನನದ ಪ್ರಿಯತ ಶಾಂತ್ಯಕಾಲದಿ ಶಕ್ತಿ ಸದಾ ಆಯ ಮಾದ ಮೂರುತಿಯು ಸಾದಾಖ್ಯದದಾಯವರಿತು ಸಂಜ್ಞೆಲಿ ಗೂಢದ ನ್ಯಾಯ ಉತ್ತರದಿಕ್ಕಸವರ್ಣದ ಹಸ್ತದಿ ಸ್ಪರ್ಶನದ ವಾಯದಿ ತ್ವಕ್ಕುಖ ಕಾಲನು ಭಾವದ। ಬೇಯ್ಯವಿಲ್ಲದರ್ಪಿಸುವದೆ ಭಕ್ತ್ಯದ। ಸ್ವಾಯದೆ ಅರ್ಧ ಚಂದಿರನಾಕಾರದ ನೋಯವಳಿದ ಪ್ರಾಣಲಿಂಗಿಜಾಗದ । ಬಾಯಮಾತಿ ರದು ಸಾಧಿಸಿ ತಿಳಿಯೆಂದ ॥೪॥

ಅಸಮಾಂಬರವು ಕಪ್ಪಿನ ವರ್ಣವು। ವಿಶುದ್ಧಿಚಕ್ರದುವರ್ತುಳಾ ಕಾರವು। ಬಿಸಜದೆಸಳ್ಗಳ್ಪದಿನಾರಿರ್ಪವು। ವಸುಸ್ವರ ಆದ್ಯಂತಕ್ಷರ ತೋರ್ಪವು। ಕುಸುಮದೀಪ್ತಿಯು ಧವಳಾಕಾರವು। ಒಸೆದುಸುರುವ ಸಾವಿರದ ಮಂತ್ರವು। ಪಸರಿಸಿ ಈಶ್ವರನಿರ್ಪುದಾತಾವು। ಎಸೆವ ಯಕಾರ ಸ್ಫಟಿಕ ವರ್ಣವು। ಉಸುರಲ್ಕಸದಳ ಮೇಘನಾದವು। ಪ್ರಸಾದ ಲಿಂಗ ಶಾಸನ ನಾಮವು। ಅಸಮಾನವಾದ ಶ್ವೇತವಕ್ತ್ರವು। ಮಸಳಿಸಿದಂಥ ಶಾಂತಿಯ ಕಲೆಯು। ಮಿಸುಪ ಕಪೋತ ಮಾಯದ ಶಕ್ತಿಯು। ಭಾಸ ಮಾನದ ಶಿವನ ಸಾದಾಖ್ಯವು। ನಾಶವಿರದ ಗಾಯತ್ರಿಯ ಮಂತ್ರವು। ದೋಷರಹಿತ ಸುಜ್ಞಾನದ ಹಸ್ತವು। ಮೋಸವಿರದೆ ಶಬ್ದವ ಶ್ರೋತ್ರ ಕೆಯು। ಮೀಸಲಾಗಿ ಅರ್ಪಿಸುವುದೆ ಭಕ್ತಿಯು। ಲೇಸುವಡೆದ ದರ್ಪಣ ದಾಕಾರವು। ಇಂತೆಸೆಗೊಳೆ ಶರಣನಸ್ಥಲವೆಂದ ॥೫॥

ಮನವದು ಮೂರ್ತಿ ತಮಾಂಧಕಾರವು। ಕೊನೆಯು ದ್ವಿದಳವು ಆಜ್ಞಾಸ್ಥಾನವು। ಅನಂತ ವಿದ್ಯುತವರ್ಣದೊಳಿಪ್ಪವು। ಮಿನುಗುವ ಹಂಸಂ ಅಕ್ಷರ ಮಧ್ಯದಿ। ಘನಲಾವಣ್ಯದ ಗುರು ಕಾನಿರ್ಪನು। ಕೊನರುವ ಈ

ಮಂತ್ರವು ಸಾವಿರವೀ ಮನೆಯಲಿ ಝೇಂಕಾರವು ತಾನಿರ್ಪುದು ಜನು
ಗದೆ ಸುಸ್ವರಗೈಯುತ ತಾನಾ। ಅನುಸಯದಿಂ ಮಹಲಿಂಗಪೆಯಾಗಿ
ಜನರರಿಯದ ಪಾತಾಳ ಮುಖದಿ। ತಾನಿರುತಲಿ ಶಾಂತಿಕಲಾದಿನಾಮ ;
ಮಿನ್ನರುಪುವೆ ಚಿಚ್ಛಕ್ತಿಗೆ ಒಪ್ಪುವ। ದಿನಪಕೋಟಿ ಪ್ರಭೆ ರೂಪಿಲಿ ಇರ್ದ
ವಸುತಿಯು ಮುಕ್ತಿ ಸಾದಾಖ್ಯದಲಿ ಪುನರಪಿ ಪೊರ್ದದ ಸಂಜ್ಞೆಗಳಿಂದ।
ತೊಸೆಯುತ ಸದ್ಭಾವದ ಹಸ್ತದೊಳು। ಸಾನುರಾಗದಿ ಸಮರಸಭಕ್ತಿಲಿ।
ಮೌನದಿ ತೃಪ್ತಿಯನರ್ಪಿಸುತಲ್ಲಿ। ನ್ಯೂನವಿರದೆ ಜ್ಯೋತಿಯು ಆಕಾರವು
ನೀನರಿ ಐಕ್ಯನ ಸ್ಥಲವಿದು ಎಂದ ॥೬॥

ಗುರುದಯವಾಗಲ್। ಮರೆದಿರದ್ರೋಗಲ್ಕರಿಷಡ್ವರ್ಗಗಳಿರದ್ವಾಳಾ
ಗಲ್ ಪರತರಕೆಳಸಲ್ಕುರುಹಿದು ತೋರಲ್ ಬೆರೆದ್ರೊಕ್ಕರಸಲ್ ನರಭಾ
ವರಿಯಲ್ ಪರಿಭವಕೆಡಿಸಲ್ಕರಿವುರೆ ನಿಲಲ್ಸುರ ರೋಲೈಸಲ್ಸುಖ ಚಿರವಾ
ಗಲ್ಸರಿ ಮಿಗಿಲಿಲ್ಲದನೇ ವರಗುರುವೆಂದರಿಯುತ ನಂಬಲಸ್ಥಿರವಿಂತಾಗಲ್ಪ
ರಿಕಿಸಿ ದೇಹದೊಳರಸುತ ನೋಡಲ್ಪರದಿ ಚಕ್ರಗಳಿರವಿಂತೆನುತ ಪರ
ಮುಮುಕ್ಷುಗಳರಿವರು ಎಂಬೀ ಭರವಸೆಯಿಂದಾ ನರಿತಷ್ಟು ಸುರಿದೆ ಗುರಿ
ಯಲಿ ಮಗ್ನರಾಗುವೆನೆಂಬುವರಿದ ನರಿಯಲ್ಬೇರಿಲ್ಲವೆಂಬ ಬಹು ಯೋಗ
ಗಳರಿಯಲ್ಕರಿವಲ್ಲವು ಇದು ಸಿದ್ಧಿಸೆ ಕರಕರಕಾಡುವ ಮಾಯೆಯನೀಗುವ
ಕುರುಹಿದು ಎನ್ನುತ ಸೋಮೆಕಟ್ಟೆ ಗುರುವರ ಪೇಳಿದ ಪರಿಯಿದು ಆದರಿಂ
ಒರೆದೆನು ಮಲ್ಲನ ಪುರದೊಳಗಿದನು ॥೭॥

---

## ನೊಣವಿನ ಕೆರೆಯ ವರ್ಣನೆ.

ರಾಗ ಲಾವಣಿ.

ಸಾರತರ ಭಾರತಖಂಡದಿ, ಭೂನಾರಿ ವದನದಂತೆ
ತೋರುವ ಮುಕ್ತಿಕ ಪುರವನು ವರ್ಣಿಸರಾರಪಾರವಂತೆ ॥ ಪ ॥

ಪುರ ಹೊರ ಭಾಗದಿ ಸುರನದಿಯಂದದಿ ಕೆರೆಯು ನಿರ್ಮಲಂತೆ।
ಪರಿಯುವ ತೊರೆ ಕಾಲುವೆ ಕಾವೇರಿ ಸರಿ ಸಮಾಂತುದುಪಿಂತೆ ॥
ಪರಿ ಶೋಭಿಪ ಉಪವನದ ಸೊಬಗು ಸಿರಿಧರನ ಮೋಹಿಪಂತೆ।
ವರ ಕದಳಿಯು ನಾರಂಗ, ಕ್ರಮುಕ ಫಲವೆರಸಿ ಸಾರ್ಪುದಂತೆ ॥ ೧ ॥

ಚೂತ ಫಲ ಸುದಾಡಿವು ಗಜ ನಿಂಬೆಯು ಕಾತುಫಲಿತುವಂತೆ ।
ಸಾತಿಶಯುದಫಲ ಪುಷ್ಪಗಳವೇ, ಸುತ್ರಾವು ಕಾಂಡದಂತೆ ॥
ಭೂತಳ ತಿರುಗುವ ಯಾಚಕರನು ತಾ ಪ್ರೀತಿಲಿ ಕರೆವಂತೆ ।
ಓತು ಬೆಳೆದ ರಸದಾಳೆ ಗರಿಯು ಕರವಾತ ಬೀಸಲಂತೆ ॥ ೨ ॥

ತೆನೆವಾಲ್ಕುಡಿಯಲ್ಕೆರಗಿ ಮರಳುವ ಗಿಳಿವಿಂಡಿನ ಸೊಂಪು ।
ತೊನೆದಾಡುತ ಬೆಳೆ ಬಾಗಿಹ ರಾಜಾನ್ನಗೊನೆಯಂಜನವೆಂಪು ॥
ಅನಿಮಿಷಾಧಿಪನ ಪುರ ಸಾದೃಶ್ಯವೆ ಘನವ್ರತರಲ್ಲಿ ಗುಂಪು ।
ಇನನೊಡಗೂಡುವ ಕಮಲಮುಖಿಯುವ್ಯರ್ಪುನುಗು
ಗಂಧ ಕಂಪು ॥ ೩ ॥

ಕೊತ್ತಳ ಹುಲಿವುುಖ ಕೋಟೆ ತೆನೆಯು ವಿಚಿತ್ರ ಬಾಗಿಲಿಂದ ।
ಶತ್ರುಗಳೆದೆದಲ್ಲಣದತಿ ವೀರರ ವೊತ್ತ ಸುಳಿವ ಚಂದ ॥
ಜತ್ತುಗೊಂಡು ಹರ್ಮ್ಯದ ಗೃಹಗಳು ಸಾಲ್ವೆತ್ತುವು ಚಲುವಿಂದ ।
ಮತ್ತು ವೀಧಿಗಳು ಸಿಂಗರ ದಳೆದುವು ನಿತ್ಯೋತ್ಸವದಿಂದ ॥ ೪ ॥

ಗಗನಜ ಶೃಂಗಾರದಂತೆ ಮಿಗಿಲಾಗಿಹ ಗೋಪುರವು ।
ಖಗಗಳ್ ಪಾರಲು ನಿಲುಕದಂತೆ ನಿಗುರಿರುವ ಸ್ತಂಭದಿರವು ॥
ಝಗಝಗಿಸುವ ರತ್ನದ ದೀಪ್ತಿಲಿನವರಂಗತಿ ಶೋಭನವು ।
ಭಗಣವು ಸಾಲ್ಗೈದುವೊ ಎನೆ ಮೌಕ್ತಿಕ ಬಿಗಿದ ಕುಚ್ಚಿ ನಿರವು ॥ ೫ ॥

ಅಧ್ಯಯನ ಪದ ಪಾಳಿ ಕ್ರಮದಿ ಪ್ರಸಿದ್ಧರಿರುವರಲ್ಲಿ ।
ಉದಾತ್ತ ಸ್ವರಿತಪ್ರಚಯ ಅನುದಾತ್ತ ಸ್ವರವು ನಾಲ್ಕರಲ್ಲಿ ॥
ನಿರ್ಧರದಲಿ ಪರಮಾತ್ಮನ ಸೇವಿಸುತಿರ್ದರೆಲ್ಲಾ ಇಲ್ಲಿ ।
ಸದ್ಗುಣಯುಕ್ತರು ಭಗವದ್ಭಕ್ತರು ಸರ್ವ ದ್ವಿಜರು ಅಲ್ಲಿ ॥ ೬ ॥

ಚತುರಾನನ ಸಮವಾದಿಪ ವಿದ್ವತ್ಪ್ರಸರವನೇನೆಂಬೆ ।
ಶತಮುಖಮಂತ್ರಿಗೆ ಸಮಪುರೋಹಿತ ಶತಿಗಳೂರತುಂಬೆ ॥
ಅತಿ ಭಕ್ತಿಲಿ ಶೃತಿಯೋದಿದ ಆರ್ಯೋತ್ತಮರ ಸಂದಣಿಂದೆ ।
ಸತತವು ಹವಿರಗ್ನಿಯು ಮಂತ್ರದಿ ಸಾಹಸರು ವಿಪ್ರರೆಂಬೆ ॥೭॥

ಅರಿವಿಜಯಾದಿ ದಾನಂಗಳಲಿ ದುರ್ಧರರಾಗುತಲಿನ್ನು ।
ಪರಿಪಾಲಿಸಿ ಪ್ರಜೆಗಳ ಕುಲಧರ್ಮವ ನೆರವೇರಿಸಿ ತಾನು ॥

ವರರಾವುತರಾಣತಿಯೊಳು ಕರುಣವ ಜರಿಸಿ ತೋರುತೇನು ।
ಪರಭಯ ಪಾಪವು ಪರ್ದಿಸದಾಳುವ ಅರಸುಗಳಿಹರಿನ್ನು ॥ ೮ ॥

ಚಿನ್ನ ಬಣ್ಣವು ತೂಕ ಪ್ರಮಾಣವು ಧಾನ್ಯಗಳಳತೆಗಳ ।
ನಿರ್ಣಯವಾಗಿಯೆ ರತ್ನಪರೀಕ್ಷೆಗಳನ್ನು ತಿಳಿದು ಪವಳ ॥
ಕಿನ್ನು ಕಣಜ ಬಲ್ಪುಚ್ಚಿಗೆರತಿಯುಂದೆನ್ನುತಿಡುತ ಕೊಳ್ವ ।
ಸನ್ನುತದಿಂದಿನ ಮಣಿಯ ಭಜಿಪ ಸಂಪನ್ನ ವಣಿಜರ್ವಿಪುಳ ॥ ೯ ॥

ಗೋಪಾಲನೆ ಧರಣಿಯ ಭಕ್ತಿಯು ಕೃಷಿವ್ಯಾಪಕ ತರುವಾಗಿ ।
ರೂಪು ರುಚಿಯ ಭೇದವ ಭಾವಿಸವತಿ ಪಾಪವರ್ಜಿತರಾಗಿ ॥
ಲೋಪವಿರದೆ ದೃಢ ಚಿತ್ತದಿ ಸರ್ವನು ಕಾಪಾಡುವ ತ್ಯಾಗಿ ।
ಭೂಪನೊಳಗೆ ಸರಿಭಾಗಗೊಂಬ ಕುಲದೀಪಕರಿಹರಾಗಿ ॥ ೧೦ ॥

ಅಷ್ಟಭೇದದೊಳು ವರ್ತಿಪ ಗುರುಕರುಣಾಷ್ಟಲಿಂಗ ತ್ರಿವಿಧ ।
ಶಿಷ್ಟ ಭಸಿತ ಸಪ್ತಕರುದ್ರಾಕ್ಷಿಗಳಿಷ್ಟ ವಿಧಿಯ ಕ್ರಮದ ॥
ಶ್ರೇಷ್ಠ ಮೂಲ ಪಂಚಾಕ್ಷರಿ ಪಂಚಕರಿಷ್ಟವರಿದ ಜಪದ ।
ಕಷ್ಟವಳಿಪ ತೀರ್ಥದ ದಶಭೇದದ ನಿಷ್ಠೆ ಏಕದಶದ ॥ ೧೧ ॥

ಸ್ವಯ ಚರಪರವೆಂದರಿದು ಭಕ್ತಿ ನಯವೆರಸಿ ತೀವಿದಂಥ ।
ಕಯ ಕೋಡಿಲ್ಲದೆ ಶಿವನ ಕಾಯದೊಳು ಬೆರಸಿ ತೋರುವಂಥ ॥
ನಿಯಮ ಕರ್ಮ ಲೋಕಾಂತದ ಹಂಗಿಗೆ ನಿಮಿರ್ದು ಬಾಳುವಂಥ ।
ಲಯವಾಗದ ಶಿವ ಧರ್ಮರತಿಯ ನತಿಭಯದಿ ಪಾಲಿಪಂಥ ॥ ೧೨ ॥

ನಂದಿ ಸ್ಕಾಂದ ಲೈಂಗ್ಯಾದಿ ಪದ್ಮ ವೆಂದೇಳ್ವ ಪುರಾಣಿಕರು ।
ಚಂದದಿ ವಾತುಲ ಭೀಮ ಮುಖ್ಯ ಸಿದ್ಧಾಗಮ ಸಾರಕರು ॥
ಕುಂದಿಲ್ಲದ ಮಹಾ ವಾಕ್ಯ ಕೌಸ್ತುಭ ಛಂದಶ್ಶಾಸ್ತ್ರಯುತರಾ ।
ನಂದ ವೀರಶೈವರು ಭೂರುದ್ರರ ಅಂದದೊಳೊಪ್ಪಿಹರು ॥ ೧೩ ॥

ಸರ್ವ ಮತವು ನಿಜಧರ್ಮವರ್ತಿಗಳು ಸರ್ವಕಾಲ ಶುಚಿಗಳ್ ।
ಅರುವಾಯದಿ ಹರಿ ಹರರ ಭಜನೆ ಯುಳಿದೋರ್ವರಿಲ್ಲನೋಡಲ್ ॥
ಪರ್ವ ಅತಿಥಿ ಸತ್ಕಾರ ದಯಾಗುಣ ತೋರ್ಪುದಲ್ಲಿ ಈಗಳ್ ।
ಉರ್ವಿಗೆ ಪೊಸತೆನೆ ಝುಸಮಾಂತೆಸೆದುದು ವೀರ್ವಕೀರ್ತಿ ಮುದ
ದೋಳ್ ॥ ೧೪ ॥

890
6893

ಆ ನಗರದ ಸಾಧ್ವಿಯರೆಲ್ಲರು ಅಭಿಮಾನ ಸುಗುಣಯುತಿಯರ್ ।
ಶೂನ್ಯವಿಲ್ಲ ಪತಿಸೇವೆಯೊಳನುದಿನ ನಾಡೆ ಅರುಂಧತಿಯರ್ ॥
ಏನನೆಂಬೆ ರೂಪಾತಿಶಯಕೆ ರತಿಯೇಕೆ ಎಂಬುವರಿರುವರ್ ।
ಸಹಾಯದಲಿ ಬಂಧುವರ್ಗ ಗುರುಸತ್ಯದೊಲುಮೆ ರತಿಯರ್ ॥೧೫॥

ಅರವಟಿಗೆಯು ಪೂದೋಟ ಛತ್ರಬಲ್ಕರವೆಸೆದಿಹ ಪೂವಲ್ಲಿ ।
ಪರಿಪರಿ ಭಕ್ಷ್ಯವು ವಾರಿ ಪೂವುಗಳ್ ಕರೆದು ಧಾತ್ರಿಯಲ್ಲಿ ॥
ತಿರುಗುವ ಜನಕುಪಚಾರ ಮಾಳ್ಪುದಾನರಿಯೆನು ಇನ್ನೆಲ್ಲಿ ।
ಅರರೆ ಇದರೊಳಾಶ್ಚರ್ಯವ ಇನ್ನೊಂದೊರೆವೆನು ಅರ್ಥಿಯಲಿ ॥೧೬॥

ಪುಟ ಭೇದನ ಸುದತಿಯ ಮಾಂಗಲ್ಯವೆ ದಿಟವಿದು ಎಂಬಂತೆ ।
ಅಟವಿಯ ಸಿದ್ಧೇಶ್ವರನ ಮಠವು ದಿಕ್ತಟದೊಳು ಘನವಂತೆ ॥
ನಿಟಿಲಾಂಬಕ ಸುಕ್ಷೇತ್ರವಾಗಿ ಪಟುತರದಿ ಕಾಣ್ಬುದಂತೆ ।
ಸಟೆಯಲ್ಲವು ರಜತಾದ್ರಿವೊಲು ಉತ್ಕಟದಿ ತೋರ್ಪುದಿಂತೆ ॥ ೧೭ ॥

ನೆಲ್ಲಿ ಬಿಲ್ವ ಗುಗ್ಗಳ ಗಂಧದ ತರುವೆಲ್ಲ ಕುಸುಮಮಯದಿ ।
ಪಲ್ಲವಿಸುತಲಿಹವಲ್ಲದೆ ಕೊಳಗಳು ಎಲ್ಲ ಕಮಲಮಯದಿ ॥
ಸೊಲ್ಲ ಗಿಳಿಯ ಸ್ವರ ಕೋಗಿಲೆ ಕುಂತಳಗಳನು ಭ್ರಮರವಿಡಿದೀ ।
ನಲ್ಲರ ಹೆದರಿಸಿದವೊ ಎನೆ ಸ್ತ್ರೀಯರು ಅಲ್ಲಿ ಗೈದರ್ ಭಯದಿ ॥ ೧೮ ॥

ಈಶ ಮರ್ತ್ಯರಭಿಲಾಷೆಯನೀಯಲ್ ವಾಸವಾದನೆಂಬೋಲ್ ।
ಭಾಸುರ ಸದ್ಗುರು ಮೂರ್ತಿಮಹಿಮೆ ಬಹು ದೇಶದವರು ಅರಿಯಲ್ ॥
ದೋಷ ಕಳೆವರ್ಸ್ವತರಾಶೆಯಲ್ಕೆಲದಾರ್ಸೋಹದರಿಕೆಯಾಗಲ್ ।
ನಾಶ ರಹಿತನನು ಓಲೈಸಲು ಬಹರೇ ಸೋಮಂದಿ ನೋಡಲ್ ॥ ೧೯ ॥

ಸಕಲ ವರ್ಣದವರ ಭಕುತಿಯಿಂದ ಸುಖಮಯನ ಸೇವೆಗೈದು ।
ನಿಖಿಳ ದುರಿತ ಕಡೆಗಾಣಿಪ ಶಕ್ತಿಯ ಯುಕುತಿಯೆಲ್ಲ ತಿಳಿದು ॥
ಅಕಳಂಕನ ದರುಶನ ಮಾತ್ರದಿ ಅಹಂಕಾರವೆಲ್ಲವಳಿದು ।
ವಿಕಳತೆತನ ಪೋಗುತಲವರ್ಗತಿ ವಿಶ್ವಾಸ ಸಾತ್ವಿಕಹುದು ॥ ೨೦ ॥

ವ್ಯೋಮದಂತೆ ಬ್ರಾಹ್ಮಣ, ದಿನಮಣಿಯಂಥ ಬಲುಕ್ಷತ್ರಿಯರು ।
ಆ ಮಹಾಸಾಗರದಂತೆ ವೈಶ್ಯ, ವಸುಧಾತೆರ ಶೂದ್ರಕರು ॥

ಸ್ತ್ರೀಮುತ್ತೈದೆ ಕೊಂಡಾಡುತ ಸೇವಿಪುದೇನೆಂಬೆನು ಇವರ ।
ನೇಮವಿಡಿದು ನಿಜಸಖಿಯರ್ಕೈಮುತಿಹ ರಮಣೀಯ ಕವರ ॥ ೨೧ ॥

ಬಡತನದ ಮಧ್ಯದೊಳೆಡೆಗೊಂಡಿತು ಮೃಡನಡಿಯ ಅರ್ಚಿಸಿಂದು ।
ಕಡುಬಯಲಪ್ಪುದ ಮಾಳ್ಪೆಂದು ಸಿಡು ಜಡೆಯ ಶಾಳಿ ನಿಂದು ॥
ಜಡಜ ಕುಮುದ ಚಂಪಕ ಮಲ್ಲಿಗೆ ಸಡಗರದಿ ಕೇತಕಿಂದು ।
ಮಡದಿಯರಾಂತು ವಲ್ಲಭ ಶಿವಲಿಂಗಕೆ ತಡೆಯಲೀಯಲೆಂದು ॥ ೨೨ ॥

ಶಿವಕರುಣಿಸಲಾ ವನಿತೆಯರಧರಕೆ ಸವೆಯದಮೃತವಾಯ್ತು ।
ಪವಣಿಲ್ಲದ ಗೌರವ ಸುಖಸಾಧ್ಯಕೆ ಗಮನ ಗಜವದಾಯ್ತು ॥
ಕವಲಿಲ್ಲದೆ ಪತಿವ್ರತವೆಂಬ ಸದ್ಗುಣ ಬಲು ಸ್ಥಿರವಾಯ್ತು ।
ಬವಣೆ ಬೇಡ ನಮಗಿನ್ನೆನುತಿಹ ಸತಿ ನಿವಹ ಕಾಣಲಾಯ್ತು ॥ ೨೩ ॥

ಚರಿಪ ಹಂಸಗಳಸ್ಥಿರ ನಿಲಯವೊ ಸುರುಚಿರದಾಗಸದಿರವೊ ।
ವರಮಂಗಲ ಕವಿ ವಂದಿಪ ಹರಿ ಶೋಭಿತ ಗುರು ಮಂಡಲವೊ ॥
ಪರಮಾಮೃತರಸನೆರಕದ ತೇಜವೊ ಪರಿಕರ ಶೃಂಗಾರವೊ ।
ಕರುಣಿಗಳರಸನ ಯೋಗಶಾಲೆ ಕಣ್ಣರಿಯದ ವೈಭವವೊ ॥ ೨೪ ॥

ವೃಷಭನಂತೆ ಅಡಿನಾಲ್ಕರ ಮೇಲೆ ಮಿಥುನಿಸಿದ ಸಿಂಹಪೀಠ ।
ಅಸಮಕಟಕ ಚಾತುರ್ಬಲ ಕಂಭದ ಮಿಸುಪ ಮೀನಮಾಟ ॥
ಬಿಸಜಚಿತ್ರದನುವಿಲಿ ತೂಲಾಯದಿ ಮಿಸುನಿಕೆಲಸಕೂಟ ।
ರಸನೆಗಳವೆಮಕರಾಂಕನ ವೈರಿ ಮಂಡಿಸಲತಿಸಾಗಾಟ ॥ ೨೫ ॥

ಈ ಮಂಟಪದೊಳು ಕನ್ಯಾಕುಲಾಗ್ರಣಿ ಆ ಮಹಾಶಾಂಭವಿಯು ।
ನೇಮಕ ಲಕ್ಷ ತ್ರಿವಿಧ ಅನಿಮೇಷದಿ ಸ್ವಾಮಿಯಿರ್ಪ ಬಗೆಯ ॥
ತಾಮಸರರಿವರೆ ಕುಂಭಕದಲಿ ಚಿನ್ಮಯನ ಸುಖದ ಪರಿಯ ।
ನಾಮ ದೂರನಿಹಸೀಮೇಲಿ ವೃಶ್ಚಿಕ ನೋವದಿಲ್ಲಖರೆಯ ।॥ ೨೬ ॥

ಅಂಗಗುಣಗಳನಲಂಗೆ ಇತ್ತು ಕರಣಂಗಳೆಲ್ಲ ಸತ್ತು ।
ಗಂಗೆಯಮುನೆ ಸಂಗದ ಶಬ್ದದಿ ಬೆಳದಿಂಗಳಲ್ಲಿ ಚಿತ್ತು ॥
ತುಂಗಮನದಹಮ್ಮಳಿದು ನಿಜದೊಳಾ ಲಿಂಗಸೌಖ್ಯವೆತ್ತು ।
ಮಂಗಳಮಯ ಪರಿಪೂರ್ಣವಸ್ತು ಬೆಡಂಗಿಗೀಗ ಗೊತ್ತು ॥ ೨೭ ॥

ಇಂಥ ಮಹಿಮನಾದ್ಯಂತವನು ನಾನೆಂತ್ರೊಗಳುವೆ ನಮಮ ।
ಸಂತಸಗೊಳ್ವರೊ, ಗೊಳ್ವರೊ ವಿಬುಧರು ಚಿಂತೆಯಾಕೆ ಬಿಡುವಾ ॥
ಕಾಂತಕಾಂತ ಶ್ರೀಗುರುವ ಭಜಿಸುವರಿಗಿಂತು ತೋರ್ದ ನಿಜವಾ ।
ದ್ಯಂತವಿರಲಿ ಶುಭ ಸನ್ನಿಧಿಯೊಳು ಜಗಜಂತುವೆಲ್ಲ ಪರವು ॥ ೨೮ ॥

ಅವನಿಯೆಲ್ಲ ಪಾವನವೈದಿತು ಜನಜವನಗೆಲುವ ಪರವ ।
ಲವಲವಿಕೆಯೊಳಾಂತಿಹ ಪುಣ್ಯದ ಬೆಳವಿಗೆಯೊಳು ಪ್ರೊಣ್ವ ॥
ವಿವಿಧ ಕರ್ಮಗ್ರಂಗಿರದೆ ನಿಜದೊಳಾವಿದಿತರಾದಪದವ ।
ಹವಣನರಿಯೆವರ್ಣಿಪೊಡೆ ತಪೋಧನ ಅವರಿಗಿತ್ತ ವರವ ॥ ೨೯ ॥

ಶಿವನಿಗಧಿಕ ಗುರುವೆಂಬ ಶಾಸ್ತ್ರಸಮ್ಮತಿಶಿರದಂತಿರಲು ।
ಭವವ ಗೆಲಲು ಉದ್ಯೋಗಿಸಿ ಆರ್ಯನ ಭಜಿಸೆ ಇರುಳು ಹಗಲು ॥
ಸುವಿಮಲ ಮೂರ್ತಿಯು ಸೋಮೆಕಟ್ಟೆ ಶುಭಧವನ ಚರಣ ಪಿಡಿಲು ।
ಸವೆಯದ ಸುಖಮಲ್ಲನಪುರನಿಗೆ ಸಂಭವಿಸಿ ತೋರ್ಪುದೆನಲು ॥ ೩೦ ॥

---

(೩)

ಶಿವನಿಗೆ ಶಿವೆಗೆ ವಂದಿಸುವೆ
ಶಿವಶರಣರೊಳೆಮಗೊಲಿದವರ ವರ್ಣಿಸುವೆ ॥ ಪ ॥

ಹರಿಯಜರರಿಯದ ಉರುತರ ಮೂರ್ತಿಯ
ಕರಮನ ಭಾವದೊಳರ್ಚಿಸುತ
ಸಿರಿಗೊಲ್ಲದರೆ ತನ್ನ ಗುರುತಾನಾವನೆಯೀವ
ಪರಮ ಪರಾತ್ಪರಗೆರಗುವೆನು ॥ ೧ ॥

ಯೋಗಿಣಿಯಾಗಿ ತಾ ಭೋಗಭಾಗ್ಯವನಿತ್ತು
ರಾಗವಿರಾಗ ತೇಜವನಾನುತೆ
ಭೋಗಿಭೂಷನ ವಾಮಭಾಗಿಯೆನಿಸಿ ಭಯ
ನೀಗಿಪ ಮಾತೃಪದಕೆ ಮಣಿವೆ ॥ ೨ ॥

ಗೋತ್ರದ ಕರ್ತರ ಸ್ತೋತ್ರಕೆ ಇಂಬಿಲ್ಲ
ಪಾತ್ರವರಿತುಹುದುಗಿಸಿದಿಲ್ಲಿ

ರಾಶ್ರೀಶಧರನಂತ ರೇಣುಕ ವಂಶದ
ಗಾತ್ರದ್ವಲ್ಲಭನೆಂದು ನಮಿಸುವೆ ॥ ೩ ॥

ಮರುಳಾಚಾರ್ಯಗೆ ವರಪಂಡಿತಾರ್ಯಗೆ
ಯುರವಿಲ್ಲದಾತ್ಮೇಕೋರಾಮಯ್ಯಗೆ
ಸುರರರಿಯುಡ ಸುರುಚಿರ ವೀರಶೈವೋ
ದ್ಧರರೆಂದು ಧರಣಿಲಿ ಪೊಡಮಡುವೆ ॥ ೪ ॥

ಚತುರ ಸಿಂಹಾಸನ ಪತಿಗಳಿವರು ಪರ
ಗತಿಗೊಡೆಯರು ಎಂದು ಪ್ರಾರ್ಥಿಸುವೆ
ಕ್ಷಿತಿಯೊಳಾರಾಧ್ಯ ಸಂತತಿ ಶುಭವೆನಲೆನ
ಗತಿಶಯವೆಂದು ಭಜನೆಗೊಂಡೆ ॥ ೫ ॥

ಭಕ್ತಿಯಂಗನೆಯನು ರಕ್ತಿಯಿಂದಲಿಕೂಡಿ
ಮುಕ್ತಿಗೊಡೆಯನಾದ ಬಸವೇಶ
ಚಿತ್ತನ * ದೊಳಗೇ ಚಿನ್ಮಯನಾದ ಷಟ್‌ಸ್ಥಲ
ವ್ಯಕ್ತಚನ್ನಣ್ಣನಿಗೆ ಶರಣೆಂಬೆ ॥ ೬ ॥

ಅಜಗಣ್ಣನಂಘ್ರಿಗೆ ನಿಜಗುಣದೇವಗೆ
ತ್ರಿಗಜಪೂಜ್ಯ ಪ್ರಭುರಾಯನಿಗೆ
ಸುಜನ ಶಿರೋಮಣಿ ಮಡಿವಾಳಮುಖ್ಯರ
ನಿಜಪಾದಪದ್ಮಕ್ಕಾನತನಪ್ಪೆ ॥ ೭ ॥

ಅಷ್ಟಾಂಗ ಯೋಗದಿ ದೃಷ್ಟಗಳನು ತಾಳಿ
ಅಷ್ಟಸಿದ್ಧಿಗಳೆಲ್ಲ ಸಹಾಯವಾಗಿ
ಕಷ್ಟವಳಿದು ಕರಿದಿಷ್ಟದಿ ನೆಲೆಗೊಂಡ
ಶ್ರೇಷ್ಠ ಸಿದ್ಧರಾಮ ಸಲಹಲಿ ॥ ೮ ॥

ಲಕ್ಷದಮೇಲೆ ತೊಂಭತ್ತಾರುಸಾವಿರ
ಮೋಕ್ಷದಾಯಕರಿಗೆ ಮಗನೆಂಬೆ

---

* ಪದ್ಯ ೬ ಚಿತ್ತನ=ಚಿಕ್ಕತನ (ಸಣ್ಣವಯಸ್ಸಿನಲ್ಲಿ)

ಅಕ್ಷಯನೊಳು ಅಧಿಕರು ಅರುವತ್ತ್ಮೂ
ರಕ್ಷರಾತ್ಮಕರಡಿ ಹೊರಳುವೆ ॥ ೯ ॥

ಜಂಗಮ ರೂಪಿಲಿ ಜಗದೊಳು ಚರಿಸಿತಾ
ಜಂಗುಳಿ ದೈವದ ಧವನಾಗಿ
ಅಂಗಜನುರುಹಿದ ಮಂಗಳಮಯಸಿದ್ಧ
ಲಿಂಗನ ಬಲಗೊಂಡು ಬದುಕುವೆ ॥ ೧೦ ॥

ಭಾಸುರ ವಿದ್ಯದಿ ಭೂಸುರಾಗ್ರಣಿಸರ್ವ
ದೋಷಗಳೆದು ಸಾಸಿರದಳದ
ಕೇಸರದೊಳು ಪರಮೇಶನ ಬೆರಸಿದ
ಆಸು ನಂಜುಂಡ ಯನ್ನೊಳಗಿರಲಿ ॥ ೧೧ ॥

ಹರ ತನ್ನ ಶರಣರ್ಗೆ ಸರಿಬಾರೆನೆನ್ನುತ
ಕರೆದು ಬೋಧಿಸಿಕೊಂಡ ಕಲಿಗಣನ
ಇರವೆಂತೊ ಆತನ ಚರಣರಕ್ಷೆಯೊಳೆನ್ನ
ಶಿರವನೊರೆಸಿದರೆ ಸುಖಿಯಾದೆ ॥ ೧೨ ॥

ತರಣಿ ಕಿರಣಗಳಿಗೆರವಿಲ್ಲದಂತೆಯೆ
ಪರಿಪರಿ ಪ್ರಮಥರು ಹರಲೀಲೆ
ಧರಿಸಿ ಲೋಕದೊಳವತರಿಸಿ ಮುಕ್ತಿಯ ಬೀಜ
ಇರಿಸಲ್ಕೆತಂದ ಅಭವರು ಎಂಬೆ ॥ ೧೩ ॥

ಬಗೆಬಗೆಯಿಂದಲಿ ಬಣ್ಣಿಸೆ ಬಗೆದವ
ರುಗುಳಿದ ತಂಬುಲ ಸವಿಯಿಂದ
ಚಿಗುರದು ಭವವಿನ್ನು ಚಿದ್ಘನ ಮಹಿಮರ
ಪೊಗಳುವಂತಾಗಿ ಪಾವನನಾದೆ ॥ ೧೪ ॥

ಎಲ್ಲರ ಕೃಪೆಯಿಂದ ಮಲ್ಲನಪುರದೊಳು
ಸೊಲ್ಲಿಸಿದೆನು ಸೋಮೆಯ ಕಟ್ಟಿ
ನಲ್ಲನೊಲಿದು ಮನದೊಲ್ಮೆಯನಾಂತಿರೆ
ಇಲ್ಲೆ ಸಾಷ್ಟಾಂಗ ಪ್ರಣಾಮೆಂದೆ ॥ ೧೫ ॥

## "ಕರಿಬಸವ" ಸ್ತುತಿ.

### ಕಂದ

ಶ್ರೀಗುರುವೆ ಸ್ಥಿತಜಗಾಶ್ರಿತ।
ನಾಗುತನೀಗಲ್ಕೆ ಜನದ ಬೇಗುದಿ ಭವವಃ॥
ಆಗಮಸಿಗಮಾಂತರ್ಥವ।
ರಾಗದಿ ರಚಿಸೆನಲು ಗದ್ಯ ಆದುವು ಪದ್ಯ ॥ ೧ ॥

ವಾಣಿಯು, ಗಣಪನ, ಕವಿಗಳ
ಶ್ರೇಣಿಯು ಬಲಗೊಳಲು ವಿದ್ಯಾತ್ರಾಣಿಗನಲ್ಲವು॥
ಜಾಣರಿದ ಜರಿಯುಲೊಲ್ಲದೆ।
ಕಾಣಿಸಿ ಸದ್ಗುಣವ, ನಿಪ್ಪು ಕರುಣದ ಸೊಮ್ಮು ॥ ೨ ॥

ಲಕ್ಷಣ ಗುಣವಿಲ್ಲದಿರ್ದೊಡು।
ಲಕ್ಷಾಧಿಪ ಧನಿಕನೆಂದಪೇಕ್ಷಿಪುದೆಂತೋ॥
ಲಕ್ಷಾರ್ಥ ಕರ್ತೃಬಲದ ದಧ್ಯಕ್ಷವೆ।
ಸಾಕೆಂದು ಒಲಿಸಿ ರಕ್ಷಿಸಿ ಹಿರಿದು ॥ ೩ ॥

ತರುವಮೂಲ ಕೆರೆಯೆ ನೀರನು।
ಉರುತರ ಫಲ ಪರಿಯನಾಂತ ತೆರದಲಿ ದೇವಾ॥
ಸುರರ ಪರಮಾತ್ಮನಾದಿ।
ಗುರುವಿನ ಸ್ತುತಿಗೂಡಿ ಬಂದು ರಸನೆಯಲಿನಿಂದು ॥ ೪ ॥

ಬಾಲಗೆ ನುಡಿಗಲಿಸಿ ಪುನರಪಿ।
ಲಾಲಿಸಿ ತೋಷಿಸುವ ತೆರದಿ ಕಲಿಸಿ ಮನದ॥
ಮೂಲಿಗ ನೀನೊರೆದುದ ನೀ।
ನಾಲಿಗೆಯೊಳು ನುಡಿವೆ ನಾನು ಅಧಿಕವಿದೇನು ॥ ೫ ॥

ಯತಿಪ್ರಾಸ ಎಲ್ಲಗಣಗಳ।
ಗತಿಯಲಿ ಗರುವಾಯುಗೊಂಡ ಸ್ಥಿತಿಯುಲ್ಲೆನಲಾ॥
ಮತಿಗೊಲಿದ ಯತಿಗಳೊಡೆಯನ।
ನುತಿಸಲು ಶಿವಗಣದಿ ಶುಭವು ಪ್ರಾಸ-ವಿಷ ಹರವು ॥ ೬ ॥

ಓರ್ವ ನೀನೊಲಿದೊಡಾವುದು ।
ಸರ್ವ ಸಹಜಾರ್ಥವದರಿಂ ಸರ್ವದಾ ಸ್ಫುರಿಸಿ ॥
ಗೀರ್ವಾಣಗಿರಿಯ ಬಳಸದೆ ।
ತೋರ್ಪುದು ತ್ವಂಪದ ಸುಖವ ಸಾಕಿದನೀವ ॥೭॥

ಸೋಜಿಗದ ಸೊಬಗ ನೋಡಲು ।
ಮಾಜಿತು ಮಾಯಾಪ್ರಬಂಧ ಮಹಿಮೆಲಿನಿಂದ ॥
ರಾಜಿಸಿ ತೋರಿಸಲೊರೆದೆನು ।
ಮೂಜಗದೊಳು ಮುಖ್ಯವೆಂದೆ ನೀನೊಲಿದಂದೆ ॥೮॥

ಇನ್ನೊರೆವೆನೆನ್ನಭಾಗ್ಯದ ।
ಮನ್ನಣೆ ಮನೆತನದಿ ಬಹಳ ಉನ್ನತವಾಂತದ ॥
ಸನ್ನುತನೀತನನಾಮದ ।
ಮುನ್ನಿನ ಏಳ್ಗೆಯ ಸಹಿತ ನುತಿಸಲು ಸತತ ॥೯॥

ಇದು ಮೊದಲು ಎನ್ನ ಗುರುವಿನ ।
ಸದನವ ಸ್ತುತಿಸುವೆನು ಅದಕತ್ಯಧಿಕವೆ ಎಂತೊ ॥
ಹದನೇನು ಅದನು ವರ್ಣಿಪೆ ।
ಸದರವೆ ಸಾಮಾನ್ಯದನಿಗೆ ಮದ ಮುಖನರಿಗೆ ॥೧೦॥

ಶ್ರೀ ಸೋಮಕಟ್ಟೆಯೆಂಬುದು ।
ಭಾಸುರವಾಂತಿದುವೆ ಭುವಿಯೊಳಗೆಸೆದುದೆಂತೆನೆ ॥
ಸೂಸದೆ ತನುಮನಧನವನು ।
ಮೀಸಲಗ್ಗೈವರಿಗೆ ಶಿವನು ಶಿರಬಾಗುವನು ॥೧೧॥

ಇಂತಿರ್ದ ಇಳೆಯರಿಚ್ಛೆಗೆ ।
ಮುಂತೊದಗಿಸೆ ಮುಖ್ಯವೆಂದು ಶಂಕರನಂದು ॥
ನಿಂತಿರ್ದ ನಿತ್ಯ ಗಣದೊಳು ।
ಕುಂತಿರೆ ಕುಟ್ಮಳವಿರಕ್ತ ಜಗದಾಸಕ್ತ ॥೧೨॥

ನೀತಳುವದೇನುಮಾಡದೆ ।
ನಾ ತಿಳಿವೆನು ನನ್ನನೆನಲು ನಿತ್ಯಾನಿತ್ಯವ ॥

ನೀ ತಿಳಿಯೆ ನಿಜ್ಞಃಹೋಗೆನೆ ।
ಭೂತಳ ಕೈ ತಂದನಾಗ ಭವಭಯಬೀಗ ||೧೩||

ಅವನೊಡನೆ ಅರಿದು ಕೆಲಬರು ।
ಅವನಿಯೊಳಲ್ಲಲ್ಲಿ ತಾವೂ ಶಿವರೂಪಾಂತಿರೆ ॥
ಅವರಿರಲಿ ಅಧಿಕನಾದೀ ।
ಭವಹರ ಬಸವಾರ್ಯನೆಂದೆ ಇವಗ್ಹೆಸರೆಂದೆ ॥ ೧೪ ॥

ಗುಣಗಣಾಗ್ರಣಿಯು ಗುಂಪಿಲಿ ।
ಮಣಿಯನೆ ಮೂವತ್ತು ಎರಡು ಶಿಷಿಯುದು ನೋಡ ॥
ಲ್ಕಣಿಮಾದಿ ಸಿದ್ಧಿಸಾಧ್ಯರು ।
ಪ್ರಣತರ ಪಾವನವ ಮಾಡೆ, ಜಗ ಕೊಂಡಾಡೆ ॥ ೧೫ ॥

ಈ ತಪೋಧನನು ಇರ್ದೀ ।
ಭೂತಳ ಬಹು ಹಂಸಮಯದಿ ಭಾತಿಸಿತೆಂತೆನು ॥
ತಾತಪದೇಳ್ಗಿಗೆ ಮೌನಿ ।
ವ್ರತವೆ ಮುತ್ತಿರ್ಪುದಂತೆ ಸ್ಮರಿಸುತ ನಿಂತೆ ॥ ೧೬ ॥

ಅರಿಯದರರಿತರ ಕೇಳಲು ।
ಕುರುಹಿಟ್ಟರು ಸೋಮಕಟ್ಟೆ ಕುವಲಯ ಪ್ರಿಯನೆಂ ॥
ದುರುತರ ನಾಮವನಿಟ್ಟರು ।
ಪರಿಕಿಸಲಿದು ಪರಮಹಂಸ ಪರಿಯಾಂತಿಹುದು ॥೧೭॥

ಸುಕೃತವ ನೀಗುವ ಸ್ವರ್ಗದ ।
ಸುಖವನು ಸೈತಿರಿಸಿ ತಾನೆ ಭಕುತಿಲಿ ಭಜಿಸಲ್ ॥
ಸಕಲಕುಸಾಧ್ಯದೊಳಿಪ್ಪುದು ।
ಪ್ರಕೃತಿಯು ಪರೆ ಕಳಚಲಲ್ಲಿ ಪಠಿಸುವ ಹಂಸ ॥೧೮॥

ಉರುತರ ಸೋಬರಿ ಬ್ರಹ್ಮವು ।
ಬೆರಿಸಲುಹಂಭೇದಗೊಂಡು ತರುವಾಯಲಿ ಸಂ ॥
ಚರಿಸುವ ಚಂರಾದಿಗಳೊಳು ।
ಮೆರೆಯುತ ಮೇದಿನೀ ಮುಖದಿ ಸ್ವರಸಂಪುಟದಿ ॥೧೯॥

ಇದು ಸೂರ್ಯಚಂದ್ರರೀರ್ವರ ।
ಬವೆಗರ ಮಾಡುತಲಿ ಬಳಸಿ ಬರುತಿಹವಾ ।
ರ್ಗದ ಪದ್ಧತಿ ಪಾಡರಿ ದಟ್ಟಿಪ ।
ಹೃದಯ ಗ್ರಂಥಿದರ ಕರ್ಮ ಉಳಿಯಲು ಧರ್ಮ ॥೨೦॥

ಯೋಚಿಸಿದೆನು ಎಲ್ಲ ಒರೆಯಲು ।
ಗೋಚರಿಸದ ಗೌರವಾರ್ಥ ಗುಣಗಣ ನಿಧಿಯು ॥
ಸೂಚನೆಯೆಂತುಟೋ "ಸೋ" ಎನೆ ।
ಭೂಚಕ್ರದಿ ಭರಿತವಸ್ತು ಭಾವ ಪ್ರಶಸ್ತ ॥೨೧॥

ಸತ್ಯನ ಸಂಸಿದ್ಧತ್ವದಿ ।
ಮಿಥ್ಯವ ಮಿಕ್ಕತುಳನಾದ ನಿತ್ಯನು ನಾನೆ ॥
ಕರ್ತೃಭೃತ್ಯತ್ವವಿಲ್ಲದ ।
ಚಿತ್ತೇಹಂ ಎಂದು ತಿಳಿಯಲ್ ಚಿನ್ಮಯನಾಗಲ್ ॥೨೨॥

ಹೆಮ್ಮೆಗೆ ಹೇಳ್ಕಲ್ಲಿದು ।
ಸಮ್ಮತ ಸಹಜಾತ್ಮರಿಂಗೆ ಸತತ ಸ್ವರೂಪಿನ ॥
ಪೆರ್ಮಲಿ ಪರುಠವಿಸಿರ್ಪರ ।
ನಿರ್ಮಲ ನಿಜ ನಿತ್ಯನಿಲಯ ಶೃತಿಸಮ್ಮತಿಯ ॥೨೩॥

ಇಂತಿದು ಜಸವಾಂತದು ಬಳಿ ।
ಕಿಂತೆಯೆ ಈ ಸೋಮೆಕಟ್ಟೆ ಎಂತಾದಪುದೆನೆ ॥
ಅಂತರವೇನಿದೆ ಆದಿಯ ।
ಲಂತ್ಯಾಕ್ಷರ ಎರಡು ಒಂದೆ "ಹಂಮೆ" ಎಂದೆ ॥೨೪॥

"ಮೋ" ಎನೆ "ಹಂ" ಎನೆ ಏಕವು- ।
ಪಾಯದ ಮಾತಲ್ಲ ಪಳಿಯೆ ಪರಿಕಿಸಿ ತಿಳಿಯ ॥
ಲಕ್ಷ್ಯಯುತವಾಕ್ಯಗಳೈಕ್ಯನೆ ।
ಸೋ ಎಂತಾಗಲಧಿಲ್ಲಿ ಮೆ ಹಂ (ಮ್ಮಿ) ನಲಿ ॥೨೫॥

ವಂದಿಸಿ ಹೊಗಳುತ ಓರ್ವರು ।
ಅಂದರು ಅಧಿಕುತ್ಸವದೊಳು ಮುಂದಿಯಃಕೂಡಾ ॥

ನಂದದಿ ನಲಿಸುವ ಈಶನ ।
ದಂದುಗದಭಯಾಭರಿತ ಕಟ್ಟಿ ದುರಿತವನಟ್ಟಿ ॥೨೬॥

ಇದು ಇನ ಬಿಂಬದ ಓಲಗಂ ।
ತಿದು ಅಖಿತವಿರವನುತೀರ್ಥ ವ್ಯಗವುದವಾಂತೀ
ಸದನವು ಸಂತತ ಸತ್ಯಕೃತ್ಯದ ।
ಯದ ಪರಿಪೂರ್ಣ ಕಟ್ಟಿ ಸುಖವಿದಿರಟ್ಟಿ ॥೨೭॥

ಆದಿಯಾಲೆ ಆಯ್ತು ಅಧಿ ।
ಕಿದು ಸಾದರದಲ್ಲಿ ತತ್ವಮಸ್ಯರ್ಥದ ಮಹಾವಾಕ್ಯವ ॥
ಬೋಧಿಸುತ ಭಕ್ತ ಭಾಗ್ಯವೆ ।
ಮೇದಿನಿಗವತರಿಸಿದಂತೆ ಮೆರೆಯುತು ಪಿಂತೆ ॥೨೮॥

ಅನುಪಮನಹಸ್ತ ಸಂಭವ ।
ರೆನಿಬರು ಏಳ್ನೂರು ಮತ್ತೆ ಹೆಚ್ಚಂತಿರಲಿ ॥
ಘನ ಮನು ಮೂರ್ತಿಗಳಾದರು ।
ಎಣಿಸಲ್ಕೆಪ್ಪತ್ತುಮೂರು ಚರ ಹದಿನಾರು ॥೨೯॥

ಷೋಡಶರ ಸತ್ವ ಸಾದೃಶ್ಯ ।
ಪಾಡಲ್ಕರಿದಾಯ್ತು ಈಗ ರೂಢಿಯ ಮೇಲಾ ॥
ರೂಢನು ರಾಜಿಸಿ ಭಕ್ತರ ।
ಮಾಡಿದ ಮಹಿಯೊಳಗೆ ಎಲ್ಲಾ ಮುನಿ ಮನಸೊಲ್ಲ ॥೩೦॥

ವೀರಶೈವಾಬ್ಧಿಗಿಂದುರೆ ।
ಸಾರಸ್ವತ ಪೂರ್ಣ ಕಳೆಯ ತೋರುವೆನೆಂದಾ ॥
ಗೀರ್ವಾಣತತಿಗಳಂದದಿ ।
ಆರೈಸುತಲಿದ್ದರ್ದಮಮ ಅಧಿಕಸ್ತೋಮ ॥೩೧॥

ಜನ್ಮ ಜಾಡ್ಯಗಳ ಜಯಿಸೆ ಜ ।
ಗನ್ಮಯ ನಿತ್ಯತ್ವ ಸತ್ತುಉನ್ಮನೆಚಿತ್ತು ॥
ಸನ್ಮತಾನಂದ ಸಕಲಕೆ ।
ಭಾನುಮಣಿ ಬಲು ಬೆಳಗನಿತ್ತ ಭಾವದ ಗೊತ್ತ ॥೩೨॥

ಆದಿಗಾಧಾರವಾದವ ।
ಮೂದೇವತ ಮುಖ್ಯಗೊಂಡ ಅನಾದಿಯ ಬ್ರಹ್ಮವ ॥
ಸಾದರದಲಿ ಸಾಧ್ಯಗೊಳಿಸ ।
ಲ್ಪಾದಿಯೆ ಇವನಾದ ತಿಳಿಯೆ ಕಾರಣ ಬಲಿಯೆ ॥೩೩॥

ಭವರೋಗ ವೈದ್ಯನೆನುತಲಿ ।
ಭುವನದಿ ಭಜಿಸುವರೆಲ್ಲ ಶಿವ ತಾ ಬಲ್ಲ ॥
ಸವೆಯದ ಅವಿರಳದನುಭವ ।
ನಿವಹವೆ ಇವನಹುದು ಎಂದು ನುತಿಸುವೆ ನಿಂದು ॥೩೪॥

ಈತನೆನಗಿಂದು ಶೇಖರ ।
ಪಾತಕವನು ಪರಿದು ಫಲಿತ ಭೂತಳದಲಿ ವಿ ॥
ಖ್ಯಾತನ ಮಾಡುತ ಕಡೆಯಲಿ ।
ಆತುಮನೊಡವೆರಸಲಹುದು ಅಧಿಕೇನಿಹುದು ॥೩೫॥

ಜರೆಮರಣ ದುಃಖ ಜಂಜಡ ।
ಪರಿಯಲ್ಪಹುದಾಪ್ತನಾಗಿ ಪೊರೆಯಲ್ಗರುತ ॥
ಸ್ಥಿರವರಿದಂತ್ಯದಿ ನಿಜದೊಳು ।
ಬೆರೆಯಲ್ಪಹುದಾಗಿ ಮರೆಯಾದರಿವಿನ ಪರಿಯ ॥೩೬॥

ಗುರುತೇನು ಗುರುವ ಸ್ಮರಿಸಲು ।
ಅರಸುವ ತಾನಾಗಿ ಬಂದು ಮರೆಯುವನೆಂದು ॥
ಸುರುಚಿರ ಸುಕೃತೋದಯ ವಿಂ ।
ತಿರಲೆಂದೆನೆ ಒರೆದನೇನೋ ಒಲಿಸಲ್ನಾನೊ ॥೩೭॥

ಮಂಜುಳ ಮಹಾಮಹಿಮೆಯಾಂತೀ ।
ಕಂಜದ ಸಮುಪಾದಕೆರಗೆ ಅಂಜನೆ ಅರಿದೋ ॥
ಲ್ರಂಜನೆಗೈದೆನು ಪದ್ಯಗ ।
ಳಂಜುಳಿ ಆರತಿಯ ಬೆಳಗೆ ಆನಿಂತೊಳಗೆ ॥೩೮॥

ಜಯಜಯತು ಎನ್ನಲೆನ್ನಯ ಭವ ।
ಭಯ ಬರಿದಾಗೆ ನಿತ್ಯ ಭಜಿಪುದೆ ಸತ್ಯ ॥

ಸ್ವಯುವರಾದ ಸೋಪುಕಟ್ಟೆಯು ।
ಪ್ರಿಯನಾದೀ ಪರಮಗುರುವ ಪಿರಿದಿನ್ನಾವ ॥೩೯॥

ಕುಲ ಶೀಲ ವಿದ್ಯ ವಿನಯದಿ ।
ಬಲವಂತಿದನಹುದು ಆದರಿಂ ಒಲಿಸಿದೆನೆಂದು ॥
ಮಲಮೂರ ಕಳೆಯಬಲ್ಲರೆ ।
ಹಲವನ್ನಳಿದಖಿಳನೆಂದು ಅರಿಯಿರಿ ಮುಂದು ॥೪೦॥

ಕವಲಿಲ್ಲದರ್ಚಿಸಲ್ಕಿವ ।
ಸವೆಯದ ಸಂಪತ್ತನೀವ ಸಕಳಾನಿಧಿಯು ॥
ಪ್ರವಿಮಲ ಪುಂಜತರಂಗಿಣಿ ।
ಅವತರಿಸಿದ ಅಭವನಂತೆ ಶಾಂತಿಹುದಂತೆ ॥೪೧॥

ಈತನ ಗುಣದಿದಿರಿಗೆ ಸತ್ಯ ।
ವ್ರಾತದ ಸೊಬಗರಿದು ತಾನೆ ವರ್ಣಿಸಲಹುದೆ ॥
ಈತನೆ ಎರಗದ ಹೆಸರಿದು ।
ಆತಗೆ ಅರಿದಾಯ್ತು ನೋಡೆ ಅರಿಮರುಳೋಡೆ ॥೪೨॥

ಭುವನದ ಬಳಗದ ಬಸವನು ।
ತವೆ ತದ್ಗುಣವಳಿದು ತಾನೇ ತಪಸಿಯವೊಲು ॥
ಶಿವಗಿರಿ ಶಿಖರದ ಮೇಲೆ ಪವ ।
ಡಿಸಿ ಇರೆ ಪರಮ ಜೊಲ್ಲು ಪರಿದಿರಲಲ್ಲು ॥೪೩॥

ಇದರಿಂದುದಯವು ಮಹಿಮಾ ।
ಸ್ಪದವಾದಿದ ಒಲಿಸಲೆಂದು ಸಂತಸಗೊಂಡು ॥
ತ್ರಿದಶರವಂದ್ಯನು ತೀವ್ರದಿ ।
ಸದನವನುಳಿದಲ್ಲಿ ಬಂದು ಸದರವು ಎಂದು ॥೪೪॥

ಭರದೋಳ್ ಕೈಚಾಚಲು ಬ ।
ಲ್ಮೊರೆಯುತ ಮೇಲ್ವಾಯ್ದು ಬರಲು ಪುರಹರನಾಗ್ಳಿಂ ॥
ದಿರುಗುತಲರಿದ ಉಪಾಯವ ।
ಶರಧಿಯ ಶ್ರಮಕಿಡಲು ಮುಂದೆ ಶೇರುವುದಂದೆ ॥೪೫॥

ಮದನಾರಿ ಮನದ ಇಚ್ಛೆಯು ।
ಒದಗಲು ಸುಧೆಗಾಗಿ ವಸುಧಾವಲ್ಲಿಕೆಯಾದ ॥
ಉದಧಿಯು ಮಥಿಸಲ್ಕೊದಗಿದ ।
ತ್ರಿದಶರಹದನರಿಯೆ ಅಸುರಾಂಬುಧಿಗಿದು ಸರಿಯೇ ॥೪೬॥

ಅಸುರ ಸುರರಾಗ ಅಭಯದ ।
ಪಸರವನಿಕ್ಕುತಲಿ ಪಳಿವಿನ್ನಳಿದಪೆವೆಂದು ॥
ಪುಸಿಯದಿರಿ ಉದಿತಸಾಗರ ।
ಕೆಸರನು ಕೇಳುವರು ಬನ್ನಿ ಸುಖ ಮುಂಪೆನ್ನಿ ॥೪೭॥

ಎಂದೆನುತ ಒಲ್ಲ ರೊಗ್ಗಿಲಿ ।
ಮಂದರ ಪರ್ವತವ ಬಳಸಿ ಸಂಧಿಸಿ ಆಗಳು ॥
ಒಂದು ಮುಂದೆನುತ ತವಕದಿ ।
ಬಂಧಿಸಲುಲಿಗೊಡುತಾಗ ಕೇಳನುರಾಗ ॥೪೮॥

ಸದರವೋ ಸಾಹಸದೇಳ್ಗೆಯೋ ॥
ಹದನೆಂತುಟೋ ಅರಿಯೆ ನಾನು ಔಚುತವೋಣಾ ॥
ಕದನವೋಲ್ಕೈಗುಟ್ಟುತ ।
ಬದುಕಿದೆ ಭಾಗ್ಯಹುದು ಎಂದು ನಗಹಿದರಂದು ॥೪೯॥

ಅಸಮಸಾಹಸಿಗಳಿವರೆನೆ ।
ವಸುಮತಿ ಕುಸಿವುತಲಿ ಮತ್ತಾ ದೆಸೆ ಬಿರಿಯುತ್ತಿರೆ ॥
ಬಸವಳಿಯುತ ಭುಜದೊಳೌಕುತ ।
ನುಸಿಗಳು ದಿವಿಜರುಗಳೆನುತ ಅಸುರರಿ ಹೊರುತ ॥೫೦॥

ಮದಮುಖರು ಮದ್ಯದೇಳ್ಗೆಗೆ ।
ಪದಕುಳಿಗೊಳುತಲಿ ಮನದಿ ಅದನೇನೆಣಿಸದೆ ॥
ಗದಗದಿಸುವ ಗರ್ವದುಬ್ಬಿಲಿ ।
ಎದೆಯೊಡ್ಡುತ ಎತ್ತಲಿಂತು ಮೇಲಕೆ ಬಂತು ॥೫೧॥

ಹರದೋಯಿತು ಅಲ್ಲಿ ಕೆಲಬರು ।
ಹರಿಯೇ ಅಧಿಕವೆಂಬ ಗರ್ವ ಅದನೇನ್ ವರ್ಣಿಪೆ ॥

ತಿರದೊಳಗಾನುತ ಶಿಂಧುವಿ ।
ನೊರೆಯಲಿ ಇರಿಸಿದರು ಬೇಗ ಹರಿ ಅಜರಾಗ ॥ ೫೨ ॥

ತಡವೇತಕೆ ಕೇಳಿರೆಲ್ಲರು ।
ಕಡೆಯಲ್ಕನು ವಾಗಿರೆಂದು ಗಡಬಡಿಸುತ್ತಂ ॥
ಜಡಧಿಯೊಳಿರಿಸಲು ಮೆಲ್ಲನೆ ।
ಹೊಡೆಯುರಿಯುತ ಹೊಕ್ಕುದಾಗ ಕಡಲನು ಬೇಗದಿ ॥ ೫೩ ॥

ಇನ್ನೇನ ಗೈವೆವೆನುತೆ ।
ಪನ್ನಗಧರನನ್ನು ಕೇಳೆ ಫಣಿಶಿರಮಣಿಯಾಂ ।
ತಿನ್ನಿದೆಕೋ ಎನಲು ಶೀಘ್ರದಿ ।
ಬಿನ್ನಾಣದೊಳೊದಗಿ ಇತ್ತ ಭುಜಗನಸುತ್ತ ॥ ೫೪ ॥

ಮುತ್ತಿ ಒತ್ತಿಡಿಯೆ ಶಿರವನು ।
ಸುತ್ತುತಲಿರೆ ಬಾಲ ಭಯವೇನ್ಹತ್ತುದೆ ಮನದೋ ॥
ಳ್ತತ್ತರಗೊಳ್ಳದೆ ತಂದರು ।
ಸುತ್ತಿದರದ ಸುರಗಿಯಂತೆ ಇತ್ತೆರನಿಂತೆ ॥ ೫೫ ॥

ಗಿರಿಗಾಗ ಹರಿಯು ಬಿಗಿದಿ ।
ನ್ನರುಪಿರಿ ಪಿರಿದಾದ ಕಜ್ಜಂದಿರವೆಂದೆನಲಾ ॥
ಶಿರವಿಡಿಯಲು ಸುರರಲ್ಲದೆ ।
ಸರಿಯಾರಿಹರೆಂದ ನಗುತಾ ಹರಿ ಮಾಯೆಲಿ ತಾ ॥ ೫೬ ॥

ನುಡಿಗೇಳಿ ಕಿಡಿಯನುಗುಳುತ ।
ಘಡಘಡ ಪಡಿಯಾರು ನಮಗೆ ಬಿಡು ಮುಖವೆನ್ನುತ ॥
ಜಡ ಭಾವದಿಂದಾ ದೈತ್ಯರು ।
ಸಡಬಡ ಗುಟ್ಟುತ ತಲೆಯ ಪಿಡಿದರೆ ಕಡೆಯ ॥ ೫೭ ॥

ಬಲು ಭಾರ ಬಾಲವೆನ್ನುತ ।
ಹಲು ಗಿರಿಯುತಲಾಗ ಸತ್ವಗ್ಗಳಿಯುವ ತಾಳುತ ॥
ಮಲ ಹರನ ಮನದಿ ಧ್ಯಾನಿಸುತ ।
ತೆಳಿದರು ಸುಮನಸರು ನಿಂತು, ಬಲುಗೈ ಯಾಂತು ॥ ೫೮ ॥

ವನಧಿಯೊಳು ಜನಿಸಿತಾಗಳು ।
ಘನತರ ಗೌರವದ ವಸ್ತು ಸ್ವರ್ಗ ಪ್ರಶಸ್ತು ॥

ಎನಲೆಲ್ಲ ಯಾರಿಗೆಂದೆನೆ ।
ತನಗಿದು ನನಗೆನುತ ಕುದುಕೆ ತೆಗೆದರು ಹುಡುಕಿ ॥ ೫೯ ॥

ವನಜಾಂಬಕನೊಲಿದು ಸರ್ವವ ।
ನನುಮಿಷರಿಗೆ ಅಧಿಕಗೊಳಿಸಲ್ ಕನಲುತ ದುರ್ಜಯು ॥
ರುರವಣಿಸಲಾಗ ವಿನಯುದಿ ।
ಸನುಮತಿಸಿದ ಶೌರಿ ಸಿಮಗೆ ಸುಧೆಯಿದೆ ಒಳಗೆ ॥ ೬೦ ॥

ಎಲೆಲೆ ಏಳೇಳಿರೆನ್ನುತ ।
ಬಲು ಚಳಕದಿ ಬಳಸಿ ಹಿಡಿದು ಬೊಬ್ಬೆಯುನಿಕ್ಕುತ ॥
ಇಳೆಯುದುರಲೆಳೆದು ಕಡೆದರು ।
ತಳಪಳನುರಿ ಕುದಿದುದಬ್ಧಿ ತರುಣಿ ದಶಬ್ಧಿ ॥ ೬೧ ॥

ಬರಲೆನುತ ಬೆಳ್ಳಗಿರದಲೆ ।
ಕರಗುತ ಕಪ್ಪಾದ ತೆರದಲಿ ಕಡಲೊಪ್ಪಿರೆದು ॥
ರ್ಧರದ ಭಯುಂಕರ ದುರಗನು ।
ಸೊರಗುತ ಸೋಜಿಗದ ವಿಷವ ಕಾರಲ್ಕಾವ ॥ ೬೨ ॥

ಸುರಗಿರಿಯೊ ಸತ್ಯ ಲೋಕವೋ ।
ತೆರಳಿರೋ ವೈಕುಂಠಕ್ಕೆಂದು ಹರಿದರು ಗರಳವು ॥
ಭರದೊಳು ತಾಗುತ ಸಕಲರ ।
ಉರುಳಿಸುತಲೆ ಉರಿದು ಬರುತೆ ಜನವನು ಸುಡುತೆ ॥ ೬೩ ॥

ಬರಬರಲು ಮುಂದೆ ಬಾಯ್ಬಿಡು ।
ತರಿದರು ತಮಗೆ ಅಯ್ಯೋ ಪೊರೆವರಿಲ್ಲ ॥
ಧರೆಗಗನ ಧಗಧಗಿಸುತಿದೆ ।
ಹರಿಯುಜರೇನಾದರೆಂದು ಹೊರಳಿದರಂದು ॥ ೬೪ ॥

ಗದಗದಿಸಿ ಗರುಡ ಯಾನನು ।
ಇದು ಏನದ್ಭುತವೊ ಎನುತ ಹೆದರುತ ಮನದೊಳು ॥
ಹದನೇನು ಅಧಿಕ ಅಭವನ ।
ಪದಯುಗವ ಸ್ಮರಿಸಿ ನಿಂದು ಪೊರೆ ನೀನೆಂದು ॥ ೬೫ ॥

ಅನುಪಮನೆ ಅಖಿಳ ಜಗಕಿದು ।
ಕೊನೆಗಾಲದ ಕಡಲಿನಂತೆ ಕಡೆಮೊದಲಿಲ್ಲದ ॥

ಘನ ವಿಪದಿ ತನುವು ಕುಂದಿತು ।
ನೆನೆದೆವು ಈಗ ಭಯವು ಇನ್ನಿಳಿಯುದು ದೇವ ॥ ೬೬ ॥

ಪದ್ಮಜನು ಪದ್ಮನಾಭನು ।
ಸಿರ್ಧರದಲಿ ನುತಿಸಲಿಂತು ಅದ್ರಿಜಾಧವ ತಾ ॥
ಒದ್ದು ತಾ ಓಹೋ ನಿಲಿ ನಿಲಿ ।
ಗೆದ್ದಿರಿ ಗೆಲುವಾಯಿತಿನ್ನು ನನ್ನನೇ ಮುನ್ನು ॥ ೬೭ ॥

ಹೆದರಿಸಿತು ಹೆಚ್ಚುಗೆಯುಲಿದು ।
ಗದಗದಿಸುತ ಹೋದೆನಿದರ ಹದನದು ಬೇ ॥
ರೆಂದದುಭುತದಿ ದಹಿಪ ವಿಷವನು ।
ಸುಧೆಯಂದದಿ ಸೇವಿಸಿದನು ಪದರದೆ ತಾನು ॥ ೬೮ ॥

ಎಲೆಲೆ ಬಲು ಮೂಢರಾದೆವು ।
ಮಲಹರ ಸಲಿಸಿದನು ತಾನೆ ಗೆಲುವೆಂತಹುದು ॥
ಬಲು ಲೋಕವೊಳಗೆ ಬೇವುದೋ ।
ಅಳಿವನೋ ಹರನೆನುತ ಅಲ್ಲಿ ಹಲುಬಿದರೆಲ್ಲ ॥ ೬೯ ॥

ಶಿವನಾಣೆ ಶಿಂಧು ವಿಷವನು ।
ಸವಿಯದಿರೆಂದೆನುತ ಕರವ ಕವಳಿಕೆಯಾಂತಿ ॥
ಧವನಳಿವ ಧರ್ಮವೆಯೆನು ।
ತವಚಿದಳಗಜಾತೆಗಳವ ಬದುಕುವನಾವ ॥ ೭೦ ॥

ಕಲಹಂಸ ಗಮನೆ ಕೇಳಿದು ।
ಫಲಿತವು ತನಗಹುದುಳಿಯಲ್ಕಿಳಿಯನೆ ನಾನೀ
ಗಳದಲೆ ನಿಲಿಸುವೆ ಗರಳವ ।
ಕಳವಳಗೊಳಬೇಡವೆಂದ ಹರನೊಲವಿಂದ ॥ ೭೧ ॥

ಇದು ಭೂಷಣಾಯ್ತು ವಿಷ್ಣಾದಿ ।
ಗಳುರೆ ನುತಿಸುತ್ತ ಇದರ ಹದನೇನೆನಲು ॥
ಮುದವಾಂತು ಮುನ್ನಲೆಲ್ಲವ ।
ಸದು ಹೃದಯನು ಪೇಳ್ದನಂದು ಸತ್ವವಿದೆಂದು ॥ ೭೨ ॥

ಅಂಬುಧಿ ಮಥನದಿ ಶಂಭುವು ।
ಜಂಬೂಫಲ ವರ್ಣವನಾಂತನೆಂಬುದು ಜಗ ನಾ ॥
ನೆಂಬೆನೆ ಎನಲು ಅಂಬಿಕೆ ।
ಗಂಬುಜ ಸಹ ನೇತ್ರ ನುಡಿದ ಶಿವೆ ನೀ ಪಡೆದ ॥ ೭೩ ॥

ವರ ಕುವರ ಕರಿ ಮುಖಾದನು ।
ತರುಣಿಯೆ ನಿನ್ನಂಗ ತಮದ ಪರಿ ಕರದಿರಲು ॥
ಜರಿಯದೆ ಜಗದೊಳಗೆಂದಿದ ।
ಮರೆಸಲು ವಿಷಮಹಿಮೆಯಾಂತಿ ಗಳದೊಳು ಕಾಂತೆ ॥ ೭೪ ॥

ಈಶನಸುತ ಇಂತಿರುತಿರೆ ।
ಲೇಸನು ಲೋಕದರಿಗಿಂತು ಸೂಸುವೆನೆಂದೆ ॥
ದೂಷಿಸದಿರುವರೆ ಸಕಲರು ।
ಆಶಿಲಿ ಶ್ರೀವರ್ಣವಾಂತನೆಂಬರು ಕಾಂತ ॥ ೭೫ ॥

ಆಹುದಹುದು ಆಶಿ ಹೆಣ್ಣಿನ ।
ಮಹಿಮೆಯು ಮದಮುಖದಿ ನಿಂತು ತೋರುವ ಭ್ರಾಂತು ॥
ಸಹಜ ಸರ್ವಜ್ಞನೊಳಗಿದು ।
ಇಹುದೆಂಬುದೆ ನಿನ್ನ ಮೋಸ ಕಡೆಗಾಭಾಸ ॥ ೭೬ ॥

ಆಸೆ ಮೋಸೇನು ಇರದಿರೆ ।
ದೋಷದ ಮಾನಿನಿಯು ಧರ್ಮಸತಿಯುಳ ವಂಚಿಸಿ ॥
ನೀ ಶಿರದೊಳಿಡಲು ನಿಜಕಿದು ।
ಲೇಸೆಂಬರೆ ಲಲನೆ ಗಂಗೆ ಬಿಟ್ಟೆಯೊ ಹ್ಯಾಂಗೆ ॥ ೭೭ ॥

ಬಿಡಲಹುದೆ ಮಡದಿ ಜಾಹ್ನವಿ ।
ಒಡೆಯನ ವಾಮಾಂಗ ವಿಡಿದು ತಡೆಯದೆ ಫಲಪದವ ॥
ಕೊಡುತಿರುವಳೆಂದು ಪೊಡವಿಲಿ ।
ನುಡಿಯಲು ಬಡಿವಾರವಿನಿತೆ ಪಿತಗತಿ ಮರೆತೆ ॥ ೭೮ ॥

ಗತಿಯೇನು ಗುರುವರಲ್ಲವೆ ।
ಕೃತಹದಿ ಕಬ್ಬಿಗರ ಕುಲದಾಸತಿ ನಿಮಗಹುದೆ ॥

ಮತಿಹೀನರಾವು ಮನಸಿಲಿ ।
ಖತಿಗೊಳದೆ ಕರುಣಿಸೀಗ ನಿಜದನುರಾಗ ॥ ೭೯ ॥

ಸಿಜವೆನಲುಗಜರಲೊಲ್ಲೆವು ।
ಭಜನೆಯು ಬಹುಬಳಗನಮಗೆ ಭಕ್ತಿಯೆಸಲುಗೆ ॥
ಅಜನೇನು ಕುಜನರೇಸಿದು ।
ತ್ರಿಜಗವ ರಕ್ಷಿಪುದೇ ಧರ್ಮ ತಿಳಿಯಿದುಮರ್ಮ ॥ ೮೦ ॥

ವಾದಿಸುತ ಹೊಲಬು ತಪ್ಪುವ ।
ಭೇದದ ಭಯಕೇಕೆ ನನಗೆ ನೀ ದಯಾನಿಧಿಸಂ ॥
ವಾದವ ಬಿಸುಟೆನು ವರ್ಣದ ।
ಆದಿಯನು ಕೇಳುವೆನು ದೇವ ತಿಳಿಸಿರಿ ಭಾವ ॥ ೮೧ ॥

ಕೇಳು ಏನದನು ಕಾಮಿನಿ ।
ಪೇಳುವೆ ತಳುವದಲ್ಲಿ ಅದರ ಮೂಲವನೆಲ್ಲವ ॥
ವೇಳೆಯಾಕಿನ್ನು ವಂದಕ ।
ರೋಲೈಸಲು ಒದಗುತಿಹರು ಪ್ರಮಥಾಗ್ರಜರು ॥ ೮೨ ॥

ವರದೀಪ್ಯಮಾನವಾಂತಿದು ।
ಕರಿದಾಗಲ್ ಕಾರಣವೇಂ ಎನೆ ಪೇಳ್ದ ಭವ ॥
ಕರಕಷ್ಟದಂಷ್ಟ್ರವದನದಿ ।
ಸುರಿಯಲ್ಕಿಂತಾಯ್ತು ತರಳೆ ಸರಿಸದೆ ಹೆರಳೆ ॥ ೮೩ ॥

ಮರಿಯಂತೆಹಾರಿ ಮತ್ತರ ।
ನರಿರ್ಝಾಡಿಸಿ ನಮ್ಮಕೊರಳ ಕರಿಯೆಂತಾಯಿತು ॥
ಪರಮಾರ್ಥ ಸಿದ್ಧಿ ತಾಳಿದ ।
ಪರಿಯಿದು ಬಸವಪ್ರಸಾದ ತಿಳಿಯಲು ಭೇದ ॥ ೮೪ ॥

ಇಂದಿಲ್ಲಿ ಇದರ್ದಾದೊಡೆ ।
ಉರಗನ ವಿಷಸೋಂಕಿದಂತೆ ಉರುಳುವರೆಂದೆ ॥
ಅರಿನಿನ್ನ ಆತ್ಮದಲ್ಲಿಯೆ ।
ಪರಿಕಿಸಬಗೆ ಬೇರೆ ಮುಖ್ಯಕರಿದಾಧಿಕ್ಯ ॥ ೮೫ ॥

ನೀಲಕಂಠನಿತು ಪೇಳಲು ।
ಆಲಿಸಿ ಅಧಿಕೋತ್ಸವದೊಳು ಅನಿಮಿಷರಾಗ ॥

ಮೂಲಬಸವಾಕ್ಷರೆಂತೆನೆ ।
ಭಾಳಾಕ್ಷನುಸುರ್ದಭಜಿಸಿ ಬಲು ಸುಖವೆನಿಸಿ ॥ ೮೬ ॥

ಏನೆಂಬೆನಿದರ ಎಳೆಯು ।
ನಾನುಸುರಲಳವೆ ನಿತ್ಯ ಅದ್ವೈತಸ್ವರೂಪವ ॥
ಮೌನಿಗಳ ಮಾನಸಾಗ್ರದಿ ।
ಭಾನುವಿನೋಳ್ಬೆಳಗುತಿಹುದ ಬಣ್ಣಿಸಲರಿದಾ ॥ ೮೭ ॥

ತಾನಧಿಕನಹುದು ತನಗೆಯು ।
ಮಾನಸಮಾರ್ತಾಂಡನಂತೆ ತಾನೆ ನಿಂತೆ ॥
ನ್ಯೂನೇನಿಲ್ಲದ ನಿಜವಿದು ।
ಆನನದಂತಿಹುದು ಕಳೆಗೆ ಕಾಂತಿಯು ಬೆಳಗೆ ॥ ೮೮ ॥

"ಬ" ಎನೆ ಸತ್ವದ ಬತ್ತಿಯು ।
"ಸ" ಎನೆ ತೈಲಿದುವೆ ಚಿತ್ತಸಹಿತಾರ್ಥದೊಳು ॥
"ವ" ಎನೆ ಹೊಳೆವ ಜ್ಯೋತಿಯಿದ ।
ರಾಯುತದೊಳು ರಮಿಸೆ ಮುಕ್ತಿಪಣತೆಯೆ ಭಕ್ತಿ ॥ ೮೯ ॥

ಬಲುಕಂಟಕಗಳಿವು ಭಾಗ್ಯದ ।
ಫಲವಾಂತಿದು ಭಕ್ತಿಯಿಂದ ಒಲಿಸಿದರಾಪೊಡೆ ॥
ಪೊಳಲೊಳಗೆ ಪೂಜ್ಯರಹರು ।
ಗೆಲುವರು ಭವಬಾಧೆಯಿಂದ ಗೆದ್ದರೆ ಚಂದ ॥ ೯೦ ॥

ಇದು ಮೂಲ ಪ್ರಣವದೊಂದಿಲಿ ।
ಉದಿಸಿತು ಅಉಮಾಕ್ಷರೊಂದೆ ಅಧಿಕವ ತಾಳೆ ॥
ಅದು ತನ್ನ ಸ್ವಸ್ವರೂಪವ ।
ಬೆದಕಲ್ಕಿದು ಭಸಿತಮಯದಿ ಬಸವಾಯತದಿ ॥ ೯೧ ॥

ಉದಯಿಸಿತು ಊರ್ಧ್ವರೇತ ।
ಸ್ಸಿದು ಕಪ್ಪಾಂತಿರುವುದಿದರ ಪದುಳದ ನಾಮಾ ॥
ಭ್ಯುದಯದಿ ಪಠಿಸಲದೆಂತೆನೆ ।
ಸದರವೆ ಸಡೆಬಡಿಕರಿಂಗೆ ಸಹಜವೊ ಹ್ಯಾಗೆ ॥ ೯೨ ॥

ಅರಿವಹುದು ಅವುವು ಆಜ್ಞೆಯೊಡನೆ ।
ಒರೆವೆನು ನಾನಲ್ಲದಿದರನು ಅರಿಪಿಸ ಮರಿಯ ।
ಸುರರರಿಯದಿರ್ದ ಸುಂದರ ।
ಕರಿಬಸವ ಎನಲು ಬೋಧೆ ದುರಿತಕೆ ವೇಧೆ ॥ ೯೩ ॥

ಸುರಂಗ ಹರುಷದಾಳುತ ।
ಕರಿಬಸವನ ಸುತಿಸಲೊಡನೆ ಪರಿಹರವಾದುದು ॥
ಕರಕಷ್ಟಕರ್ಮದಾದಿ, ದಿವಿ ।
ಜರುಘಿಸೆ ಜಲಜಾಪ್ತನಂತೆ ಶುಭಕರವಾಂತೆ ॥ ೯೪ ॥

ಜಯ ಜಯತು ಎನುತೆಲ್ಲರು ।
ಭಯಪೂರಿತ ಭಕ್ತಿಯಿಂದ ಭಜಿಸುತ್ತಿರಲಾ ॥
ದಯಭರಿತನಾಗಿ ಶಂಕರ ।
ಸ್ವಯಕೈಲಾಸಕೆಂದು ತೆರಳಿದನಂದು ॥ ೯೫ ॥

ಭಜಿಸುವರ ಭಕ್ತಿಭಾವದ ।
ಗಜಬಿಜಿ ಗೌಸಣಿಗೆ ಹರಿಯಲ್ ತ್ರಿಜಗದ್ದೈವವು ॥
ನಿಜರೂಪವ ತಾಳಿ ಬಂದಿರೆ ।
ಮಝುಭಾಪೆನೆ ಮಲ್ಲಸುಂದಿ ಪೊಗಳಿದ ಮುದದಿ ॥ ೯೬ ॥

ಮೊದಲಾದನು ಮರುಳಾರ್ಯರ ।
ಸದನದಿ ಸಪ್ಪಿಂಡವೆಂದು ತದನಂತರದೊಳು ॥
ಅದನುಳಿದು ಅಧಿಕವೆನ್ನುತ ।
ಇದು ತಾಳಿದ ಲೀಲೆ ಚಂದ ಯತಿ ಮೊದಲಿಂದ ॥ ೯೭ ॥

ಇವನನುಗ್ರಹವು ಇರುತಿರೆ ।
ತವ ಧನ್ಯನೆ ತಪ್ಪದೆನುತ ತವಕದಿ ಸತತ ॥
ಭುವನದಿ ಬಲುಮೆಯುನಾಂತರು ।
ಶಿವನೊಲಿಪುದೆ ಶಿಷ್ಟವೆಂದು ಗುರುದಯವಿಂದು ॥ ೯೮ ॥

ಎನಗಾಗಲೆಲ್ಲ ಕಾಲದಿ ।
ಮನದೊಳ್ ಭಜಿಸುತಲಿ ಮರಳೀನೊರೆಯದೆ ನಿತ್ಯ ॥

ಘನಗುರುವೆ ಸತ್ಯವೆನ್ನುತ ।
ತನುಮನಧನ ಕರ್ತೃವೆಂದೆ ನಂಬುಗೆಯೊಂದೆ ॥ ೯೯ ॥

ಜನರಿಷ್ಟ ಧರ್ಮನಿಷ್ಠೆಯು ।
ಸನುಮತಿ ಸಹಜಾತ್ಮ ಸತ್ಯಾಭ್ಯುದಯಾಂ ॥
ತಿನಿತು ಗುಣಮುಳ್ಳ ವಂಶಿದು ।
ಅನುಪಮಾರಾಧ್ಯಗೋತ್ರ ಮೊದಲೆ ಪವಿತ್ರ ॥ ೧೦೦ ॥

ಗುಣವೇನು ಕುಲವದೇನಿದು ।
ಅಣುವಿನ ಸಮುವರಿಯಬೇಕು ಎಣಿಸದೆ ತಾನೆ ॥
ಗಣಿಸಲು ತಾ ತಕ್ಕುದು ಎನೆ ।
ಮಣಿದುಸುರುವೆ ಮಾನ್ಯರಿಂಗೆ ಅಣುಗನ ಹಾಂಗೆ ॥ ೧೦೧ ॥

ಜನನಿ ಜನಕಾತ್ಮಜಂಗೆಯು ।
ಘನಗುರುಪಹುದೆನುತ ಶಾಸ್ತ್ರಸನುಮತಿಯಿರಲಾ ॥
ಅನುವಿನಲಿ ಆವರ ಪಳ್ಗೆಯು ।
ಮನದೋರಿದನೆಲ್ಲ ಮನ್ನಿಸಿರೆಲ್ಲ ॥ ೧೦೨ ॥

ಇಳೆಯೊಳು ಹೇಳಲ್ ಕೇಳಲ್ ।
ತಿಳಿಯಲ್ ಪಠಿಸಲ್ ಮೇಣರ್ಥವನುರೆ ಅರಿಯಲ್ ॥
ಸ.ಲಭದಿ ಶುಭವೆಂಬೆಲ್ಲವು ।
ತಳುವದೆ ತಾ ಬಹುದು ಸಿದ್ಧ ಕುಹಕಿಗಬದ್ಧ ॥ ೧೦೩ ॥

ಇದು ಭಕ್ತಿಭಾವದವರಿಗೆ ।
ಇದು ತತ್ವದವರಿಗೆ ಮುಖ್ಯಸದನೊಪ್ಪುದು ॥
ಇದುವೆ ಜಗದಾದಿ ಬೀಜವು ।
ಇದನರಿಯಲ್ಕವನೆ ಧನ್ಯ ಭಜಿಸಲು ಪುಣ್ಯ ॥ ೧೦೪ ॥

ಬರುತಿಹುದು ಭಂಗವಿಲ್ಲವು ।
ಹರಕರುಣವು ಅಧಿಕವಹುದು ಮರೆದಾದರುತಾ ॥
ಕರಿಬಸವನ ನೆನೆಯಲು ಕಷ್ಟವು ।
ಪರಿದೋಹುದು ಪರಿಕಿಸಿಂತು ಗುರುಬಲವಾಂತು ॥ ೧೦೫ ॥

## ಆನಂದ ಭೈರವಿ ಆದಿತಾಳ.

ಜಗದೀಶ ವೀರನೆ ನಿನ್ನ ಬಣ್ಣಿಸಲೆಂತಹುದು । ರಗಪತಿ § ವಾಗಳಿಗು ನ್ನಶವಾಗಿರಲು ನಾಸೀ । ಜಗದೊಳು ನುತಿಸಲೆಂತೆನ್ನಮತಿ ನಿನ್ನದಾಗಿ । ಬಗೆದೋರಲುಸುರುಪೆನು ಮುನ್ನ ಅರ್ಚಿಸಿದಂಥ । ಖಗರಾಡ್ಧ್ವಜರಿಂಗಗ ಣಿತ ಭಾಗ್ಯವ । ನಿಗಮಾಗಮಗಳ್ನುತಿಸುವ ಶಕ್ತಿಯು । ಜಗಪಾಲನ ಜಗ ಸೃಷ್ಟಿಯು ಮಾಳ್ಪಗ್ಗಳಿಯದ ಸಿದ್ಧಿಯು । ಮಿಗಿಲಾಗುರೆ ದಿಗ್ಪಾಲಯಾಧಿಪ ರೋಲೈಪಸ । ಮಗ್ತ್ರಾಣಿಗಳ ಮಾಡಿದಡಂದು ಬ್ರಹ್ಮಸುರ । ನಗರಿಯು ನುಗ್ಗೊತ್ತುವ ಮನದೇಳ್ಗಿಯು ದನುಜರಂತರವ । ಬಗೆಯದೆ ಒರೆವೆನು ಕರುಣಿಸಲಾಗಳಿ ಮು । ನಿಗಳ ಭಂಗಿಸಿ ವನವಾಸಕೆ ಆ ದಿವಿಜರ । ಸಾಗಿ ಸುತನುವರದಲಿ ಸುರರಾಜನ ಮರ್ದಿಸಿ ಘನವಸ್ತುವನೆಲ್ಲವ ಪುರಿಗೇರಿ ಸಿಕೊ । ನೆನೆಘಗಕಂಜದೆ ಸ್ತ್ರೀಯರ ಪಿಡಿದಂತಿರದಲೆ ಆ ಮಘವಾನನ ಶಿಕ್ಷಿಸುತಿರುತಿರೆ ತ್ರಿದಶರು ಪೋಗಿ ಪದ್ಮಜನವರೆಯುಲಿ ದೂರಲ್ಕಂಡು ಕಮು । ಲಗರ್ಭನ ಮುಂದುಸುರಲ್ಬೇಗ ನಿನ್ನ ಮಂದಿರದೆ । ಡೆಗೈತಂದೆಲ್ಲ ದೂರಿ ಹೊಂದಿಸುತಲಿ ನುತಿಸಿದ । ರಾಗ ಶಾಶ್ವತನೆ ಸಲಹೆಂದೊರಲಿಂದ ರಂ । ದಗಾಧಗರಳೊಳಿಸುತಲಿರೆ ಉಳುಹಿದೆಯೋ ದೇವ । ಈಗ ಮಮ ವಿಪತ್ತಿದು ಬಲುಹು ಯಮ್ಮನುದ್ಧರಿ । ಸಗ್ಗದ ಕರುಣಾರ್ಣವ ನಿನ್ನನು ಮರೆ ಹೊಕ್ಕೆವು । ಈಗಲು ಕೃಪೆ ಮಾಡಿಯೆ ದನುಜರ ಗೆಲ್ವ ಉಪಾ । ಯ ಗಳ್ನಿನೆಯೆಂದೆನುತಿಹ ಅನಿಮಿಷ ಶ್ರೇಷ್ಠರಿ । ಗಗಜಾ ರಮಣನೆ ಅಭಯವ ನಿತ್ತು ತ್ರೈಪುರ । ದ ಘನಪನ ಮುರಿವೊಡೆ ಅನುವಾದೆಯೊ ಕೇ । ಳ್ಗಗನ ಜೂಟನಾಂ ಪೊಗಳಲ್ಕರಿದೈ ॥ ೧ ॥

ವಾರಿಜೋದ್ಭವನ ವರದಿಂದ ನಿಶಾಚರರಿಗಿಷ್ಟು । ಸೇರಿತಧಿಕ ಬಲ ವೆಂದ ಶೌರಿಗೆ ಅದಿತಿ ಬಾಲರ । ಪೊರೆಯಬೇಕೆಂದು ನಿನ್ನಯು ನುಡಿಯು ಕೇಳುತೆರಗಿ । ದರು ದಯು ಬಂದ ಈ ಹದನೆ ನಮಗ । ಪಾರ ಸುಖವು ಸೇರಿತು ಎಂದಾ ದ್ವಿಜರೋಲೈಸುತ । ಪರಮಾತ್ಮನೆಂದು ಜಂಭಾರಿ ಸತ್ತಿ ಗೆಯು ಪಿಡಿಯುಲು ರತ್ನದ । ಹಾರ ವಲಯಾಖಂಡದ ದಿಕ್ಪಾಲರು । ಚೌರಿಗಳ್ಬೀಸಲ್ಕೀ ಧರಣಿಯೆ ರಥ ಚಂದ್ರ । ಸೂರ್ಯರೇ ಗಾಲಿಗಳ್ನಿಗಮಾಗಮ ಗಳೆ । ತುರಂಗವು ಚಾರು ರಥದ ಸಾರಥಿ ಕೇಸರಿಮುಖ । ಮೇರುಚಾಪ

---

§ ವಾಗಳಿಗೆ = ಸರಸ್ವತಿಗೆ

ನಾರಾಯಣ ಬಾಣವು । ಭೂರಿ ಭೂತ ಗಣ ಮಾರ್ಜಾಲ ಕರಿಮುಖ ಕೇಣಿಗೊಂಡು ಸೇನಾಧಿಪತಿತ್ವದಿ ವೀರ । ದರ್ಪರ ಶಿಕ್ಷಿಸ ಭಪ್ರಗಣದ ವೈಯಾರದೊಳೊಪ್ಪುತ । ರುದ್ರಮುಂದ ಪ್ರಮಥಾಳಿಗಳೆಡಬಲ ಒಪ್ಪು । ತಿರಲು ಜಯಭೇರಿ ಮುಖ್ಯ ವಾದ್ಯದ ಬಲು ರವ । ಧರೆ ಗೀಳಿಡೆ ಶಂಕರ ವೃಷಭನೊಡನೆ ಕೈಲಾ । ಗುರಿಯಿಂದಲಿ ಬಿಜಯಂಗೈಯೆ ಜಯಲೋಲ ಜಾಹ್ನವೀ ರಮಣ ನಿನಗೆ ಸರಿ । ಯಾರೆನ್ನುತ ಪ್ರಣಾಮವು ರಭಸಂಗೊಡೆ ಮಾರಹರನೆ ರಥವೇರುತ । ಕರದಲಿ ಭಾರಿ ಬಿಲ್ಪಿಡಿದು ಚೇಗೈಯಲು ಇ । ಮರಾರು ಕದನಗೈತಂದಪರಾಗಲಿ ಕೋಳುಗೊಂಬೆ । ಹರಹರಿಗಳಿಗೆ ಭಯವೇನು ಏತಕೇ ತಡವೇ । ಳಿರೆಂಬ ಖಳರಾಳಿನೊಳಗೆ ಬಹುದಾಳಿ ಬರಲು ರಣಧೀರ । ಭೈರವನು ಮುಂಗುಡಿಯಲ್ಲಿ ತಡೆ । ದಾರು ಭಟಿಸಿ ಕೋಳಾಹಳ ವಾರ್ತೆಯು ಕೇಳುತಲ । ಸುರರ ಪಡೆ ಮುಸುಂಕೆ ಕಲ್ಮೇಘ ದಂತೆ । ವರುಷದ ಕ್ಷೀರ ಶರವಿರೆ ಮೀರಿತೆಂದು ಧನುವಿಗೆ ಮಾರ್ಗಣ ರೌದ್ರಿಯ ಕರದಲಿ ಹೂಡಿದೆಯೈ ನೀನು ॥ ೨ ॥

ನೋಡಿ ನಿಂದವು ನೇತ್ರಗಳು ಸಾವಿರ ವರುಷಾಗೆ । ಕಂದಿ ಹರಿಯ ಜರ ಮೊರೆಗಳು ತಪಿಸುತಲಿ । ಖೇಡ (ದ?) ರಾದರು ಸುಮನಸಾದಿಗಳು ಅಷ್ಟರೊಳು । ಕೂಡಿ ತೋರಿತು ತ್ರಿಪುರ ಕೀಲುಗಳು ಆದ ಕಂಡು । ರುಂಡ ಮಾಲಾಧರನೆ ಕೋದಂಡ ನಾರಿಯ ಸೇದಿ । ಬಿಡಲು ಆರ್ಭಟಿಸುತಾಗ । ಕಿಡಿ ಬಾಯೊಳುದುರೆ ಬಡಬನಂತೆಯು ಆ ತಾರಕ ಪುತ್ರರ ಪುರಕೆ । ನೀಡಿ ತುದಿನಾಲಗೆಯನು ಹೊರಗೊಳಗು ಇರ್ಪ । ಕಡು ವೀರರೊಡಲೊಳಾಗತಿ ರುಧಿರವನುರೆ । ತೋಡುತ ಕರುಳನು ಬಾಯೊಳೊಗಿಸಿ ಹಮ್ಮೀರರ ಬಿಡ ವಟ್ಟೈಸಿ ಹಿಡಿದು ಹೋ । ಳ್ಮಾಡುತ ಮಿದುಳನು ಸೀಡಿ ಭೂತಗಳ್ಗೀಡಿ ರಿಯುತ ಬಂದೊಡೆ ತಿವಿದು । ವೈಡೋರಿಗಳಿದು ಸೀರೊಡೆ ನೆತ್ತರ್ತಲೆ ಯೋಡಿನೋಳ್ಕುಡಿಸುತ । ಕಾಡಿ ಕೊಂದು ಪಾಳ್ಮಾಡೆ ನಗರ ಜನರೋಡಿ ಅಳ್ದರೆದುರೋಡಿ ಬಿಟ್ಟರಸು । ನೋಡಿ ಕೋಪ ಝಾಡಿಯುತ್ತ ಒಡಲು ಹುರಿ ಗೂಡಿ ಮನವು ಭಯ । ಬೇಡಿರೆಂದು ಭಾಳಾಂಬಕನೆದುರಡಹಾಯಿದು ಬಂದ ದಿಂಡೆಯರ ಕಂಡು ಹುರಿಮುರಿದೋಡಿಸೆ ಅಮರರ ಕಂಡು ಗಾಢ ಶಿಖಿ ನೇತ್ರವಟ್ಟೆ ಆಡನಾಡಲೇನು । ಗಾಢಾಂಧ ದಿನಪಗೇನ್ಪಾಡೆ ಪುರಗ । ಳ್ಸುಡಲಾರು ತಡೆವರಿನ್ನೇನು ಗತಿಯು ಹೊಯ್ದಾಡಿ ತಮ್ಮೊಳಗೆ । ಬೇಡ ಹರನ ವೈರವು ಮದನಾರಿಗೆ ಈಡೆ ಮದಡು ರಕ್ಕಸರೆನ್ನುತ ಸುಟ್ಟೋದಿ

ಗಳಾದರು ಗ । ರುಡ ಯಾನಮುರ್ಗಂತಾದನರ್ಶಿಸಿ ಸುಖಿಯಾದರೆಂಬ ನುಡಿ ಈ ಧರೆಯೊಳು ಮಲ್ಲನಪುರ ವಾಸಿಯೋಳ್ಕಾಡಿ ನುಡಿಸಿದೆಯೊ ಸೋಮೆಕಟ್ಟಿ ಗುರುದೇವನೆ ॥ ಮೃಡ ನೀನಲ್ಲದುಳಿದರಿಂದೇನು ಆಹುದೊ ದಯ । ಮಾಡಿ ಕರುಣಿಸೈ ಭಜಕರ ಬಂಧು ॥ ೩ ॥

---

ಆಲಿಸ ಬಹುದಾದೊಡೆ ಅಭಯಂಗೊಡು । ಮೂಲ ಪ್ರಣವ ಮೂಲಿಗ ಮುನಿವಂದ್ಯ ವಿಶಾಲ ಮಹಿಮ ಶಾಂಭವಿ ಸುಖಲೋಲನೆ ಬಾಲನ ಬಿನ್ನಪವ ॥ ಪ ॥

ತಾನಲ್ಲದ ಜಡ ಭೌತಿಕ ತನ ವಿದ ನಾನೆನ್ನುತ ಕರುಣಾಳಿ ವಿಷಯ ವಿಡಿ । ದೇನುಂಟೆಲ್ಲವನೆಸಗುತೆ ತತ್ಫಲ ಯೋನಿಗಳೊಳು ತೊಳಲಿ ॥ ಕಾನನದಲಿ ಕಾರ್ಗತ್ತಲೆ ಕವಿದಂಥ ನಿಕಾಯವಿದರೊಳು । ಭ್ರಮೆಗೊಡಲು ಶ್ವಾನ ಹೊಂದಿ ಶತಸಾವಿರ ಜನ್ಮಕೆ ತಾಳೆಯುಳತಟಹುದೈ ॥ ೧ ॥

ಮಾನ ಸವಿದು ಮಾಯೆಯ ಕೈಯೊಳಗಣ ವೀಣೆಯಂತೆ ಸಂಸೃತಿಯೊಡಗೂಡುತ । ಸಾನುರಾಗ ಸಮ್ಮತಿ ಗತಿಲಯ ದುರಿತಾನುಬಂಧವಿಡಿದು । ಗಾನಗರಳ ಸಾಹಿತ್ಯವೆನಿಸಿ ಭವಕೇಣಿಯಾಂತು ಪಾಶಾಷ್ಟದಿಯುಲಿ ಬಿನ್ನಾಣದೋರಿ ಬಿರಿದಾನುತಿದಿಕೊ ಕ್ಲೇಶಾನು ಮಥದೊಳೊಂದಿ ॥ ೨ ॥

ಹೀನ ವೃತ್ತಿ ಬೇಡೆಂದರೆ ಜಗದೊಳು ಆಣವಾದಿ ಮಲದ್ವಂಗು ಬಿಡದು । ಬಿಡೆ ಮಾಣಗೊಡದು ಆಶೆಯು, ಅದು ಬಿಟ್ಟರು ಮಾನಗರ್ವ ಬಿಡದೈ । ಮೀನು ಗಾಣದೊಳು ಸಿಲುಕುವಂತೆ ಮಿಥ್ಯಾನುಭವದ ಬಯಕೆಯೊಳತಿ ದುಃಖವೆ ತಾನೆ ಒದಗಿ ತಪ್ಪಿಸಿಕೊಳಗೊಡದಿನ್ನೇನು ವಿಧಿಯ ಕೃತಿಯೊ ॥ ೩ ॥

ಏನು ಮಾಡಲಹುದಿನ್ನು ಇದಕೆ ಸುಖಗಾಣದ್ಹೋಯ್ತು ಕನಸಿನೊಳಾದರೂ ಶಿವ ನೀನೆ ಗತಿಯು ನಿರ್ಮಲನ ಹವರಿಗಿನ್ನೇನು ಹದನು ತಿಳುಪೈ । ಜೀನ ಬೋಟ ಜಕ್ಕುಲಿಗ ಕರಾಳರ ಶ್ರೇಣಿಯುಳಿದು ಆರಧ್ವದೊಳತಿಶಯವೇನು ಅದರೊಳಾಸಕ್ತನಾಗಲಘು ತಾನೆ ಕೆಡುತಲಿಹುದೈ ॥ ೪ ॥

ದಾನ ಯಾಗ ಜಪತಪ ನಿಯಮಾರ್ಚನೆ, ನ್ಯೂನವಿರದ ಸತ್ಕರ್ಮಗಳವು ಅಜ್ಞಾನ ತಮದ ಸೊಡರಂತೆಸೆವಖಿಳವದೇನು ಭಗಣ ಫಲವೈ

ಕಾಣಲರಿದು ಕಂಡರೂ ದಿಟವಾಗದು ಜ್ಞಾನಕಮಲ ವಿಕಸಿತವಹ ಪರಿಯಂತೇನ ಮಾಡೆ ಜಡ ನೀನು ಒಲಿಯಲಜಡಹುದು ಭಾನುನಯನ ॥ ೫ ॥

ಜ್ಞಾನವೆನಲು ಜ್ಞಾತಕದರಿವೆಂಬುದಕೇನು ಸಾಕ್ಷಿ ತತ್ಪದ ತ್ವಂಪದ ಉಭಯಾನು ಬಂಧಿ ಭಾವದ ಬಗೆ ಅಂಜನೆ ತಾನೆ ಆತ್ಮಸ್ಥಿತಿ ಗೈ । ಧೇನುವಿನೊಳು ದಿವ್ಯಾವೃತವಿಹ ಪರಿ ತಾನೆ ನಿಜದ ನಿರ್ಮಲ ಪದಭಕ್ತಿ ನಿಧಾನವದುವೆ ಸೋಹಂ ಸುಖ ಸಿದ್ಧಿ ಪ್ರಧಾನ ಕರ್ತೃ ನೀನ್ನೈ ॥ ೬ ॥

ಧ್ಯಾನ ನಿನ್ನ ಧಾರಣವದು ಕಾರಣ ನೀನು ನಾನು ಎನ್ನಲು ಭಿನ್ನಾಂಶವದೇನು ಇಲ್ಲ ಸತಿಪತಿರತಿಕೇಳಿಯೊಳೇನು ಭೇದವೈಸೆ ॥ ಸ್ವಾನುಭವ ಸುಖ ಭಾವನೆ ಅಗಣಿತಲೀನವಾಗಿ ಲಿಂಗಾಂಗ ನಿಜೈಕ್ಯನು ಮಾನವಿರದ ಚಿತ್ಪರಮಾಣುವೆ ನೀನೆ ಮಹತ್ಸ್ವರ್ಷೈ ॥ ೭ ॥

ಏನನೆಂಬೆ ಎಲ್ಲವ ನಿನಗೊಪ್ಪಿಸಿ ತಾನು ತಾವರೆಯ ಪತ್ರದಂತೆ ಇರಲೇನು ರೂಪು ರುಚಿಯೇನು ತೃಪ್ತಿ ಬಳಿಕೇನು ಅವನೆ ನೀನ್ನೈಜ ॥ ನಿಬಂಧನೆಯ ಪೊಗಳಿ ಶೃತಿಯು ಸನ್ಮಾನವೆತ್ತು ಸುಮ್ಮನೆ ಇಹಪರಿ ನಿನ್ನೇನು ಎನಲಿ ಸಹಜಾನುಭವಕೆ ನೀನಾನೆ ಎಂಬ ಹದನ್ನೈ ॥ ೮ ॥

ಆನು ಎಂಬ ಹಮ್ಮಳಿದ ಆಕಾರವೆ ತಾನೆ ಶಕ್ತಿ ಭಕ್ತಿಗೆ ಅದು ಬೀಜವು । ಊಣಯಿರದ ಉನ್ಮನೆ ಉಚಿತಾಕ್ಷರವೇನೊ ಸಗುಣ ಬ್ರಹ್ಮೈ । ಮಾನವಾಂತ ಮಹಿಮಾದಿಕ ವರ್ಣವದೇನು ಸವಿಯೊ ಮಾಮಾ ಎನುತೆಲ್ಲರು ಏನು ಎನದೆ ಬೈಚಿಟ್ಟಿರದನು ಗುರು ತಾನೆ ಬಲ್ಲನೆಂದು ॥ ೯ ॥

ನೀನೆ ಒಲಿದ ಹದನಿದು ನಿರ್ಮಲ ಪದ ತಾನೆ ನೀಲತೋಯದವಧ್ಯಸ್ಥಿತ ಕೋಣೆಯೊಳಗೆ ಕಲಹಂಸಗೂಡಿ ನಿರ್ವಾಣವೈದುತಿರಲು ॥ ಕೇಣವಿರದ ಬೆಳಗೆದ್ದು ನಭದೊಳದು ಲೀನವಾಗೆ ನಿಜದೊಳು ತಾನಾದ ಸುಮ್ಮಾನ ವಿಷಯ ಸುಖಶರಧಿ ರುಚಿಗೆ ಮಿಗಿಲೇನು ಇಲ್ಲ ತಿಳಿಯೈ ॥ ೧೦ ॥

ತನ್ನ ತಾಲು ಮೂಲದಿ ದ್ವಾದಶಬೆರಳುನ್ನತದಲಿ ಉದ್ಭವದುರಿ ಲಿಂಗವು ಭಿನ್ನವಿರದೆ ಬೇರೆನಿಸದತುಳಸುಖವನ್ನೆ ತೀವಿಕೊಂಡು ॥ ಚನ್ನೆಯರುಗಳಾರುತಿಯ ಸೊಡರಿನುತ್ಪನ್ನ ಕಾಂತಿ ಕಳೆ ಬೆಳೆಯನುಳಿದು ಬಾವನ್ನಗೂಡಿ ಬಯಲಾಗುಳಿದಾಗಸ ನಿನ್ನ ರೂಪು ನಿಜವೈ ॥ ೧೧ ॥

ನೀನೆ ನಿರ್ಮಲನು ನಿತ್ಯಸುಖಿಯು ನಿರ್ಮಾಯನೆಂದು ನಿಜಮಂದೊಳಿರೆ ಜಗವೇನು ಜಂಝಡಿದು ಏನು ಇದರೊಳಿನ್ನೇನು ಎಂಬ

ಬುದ್ಧಿ ತಾನೆ ಘಟಿಸಿ ತಾತ್ರಿಕದೊಳು ಸಂವಿತ್ತನೆ ಆತ್ಮತದ್ಗತ ಅಮಳ್ಳೈಕ್ಯದೊಳೀ ಸೀನರಿಯುದಿಷ್ಟರ ಬೀರಿಸಿಸದನೂನ ತೃಪ್ತಿ ನಿನಗೈ ॥ ೧೨ ॥

ಮಾನವಾಂಶ ಮಧ್ಯಮ ಪದಭಕ್ತಿಯೊಳೀನು ಎನಲು ತನುಮನಧನ ನಿನ್ನಧೀನವಹುದು ದಯಮಾಡು ನೀನು ಭಜಕಾನನಮಣಿಮುಕುರ ಏನು ಏಕೆ ಸುಮ್ಮನೆ ಇಹೆ ಭಕ್ತಾಧೀನನೆಂಬ ಬಿರುದ್ಹೋಯ್ತೆ ಈಗ ದಯಗಾಣದಿರಲು ನಾನೇಕೆ ನನಗೆ ನೀನೇಕೆ ನಿಜದಗೊಡವೇತಕ್ಕಿನ್ನು ಬರಿದೆ ॥ ೧೩ ॥

ನೀನು ನಿನ್ನ ಸುಖಸಹಿತ ಇರಲ್ಕರಿದೇನು ಭವದಯಾಂಘ್ರಿಯು ನಿಜ ಭಕ್ತಿನಿದಾನವಿಧಿ ಕೊ ತದ್ಗೃಹವಿದೆ ಎನ್ನಾಜ್ಞೇಯದೊಳುನ್ನತದಿ ॥ ಬಾಸ ಮುಖ್ಯ ನವವಿಧ ಭಕ್ಷ್ಯಗಳ್ಹರಿವಾಣದಲ್ಲಿ ತುಂಬಿದ ಪರಿ ಯಿನ್ನೇನು ಮಂತ್ರದಧೀನ ನೀನೆ ನಿನ್ನಾಯತಹುದು ಎನಗೈ ॥ ೧೪ ॥

ಕ್ಷೋಣಿಯೊಳಗೆ ಮಲ್ಲನಪುರಹೃದಯಾಬ್ಜಾನು ಸಂಗತಮಿರುತಲಿ ನ್ನೇನಪೂರ್ವ ದಯಗಾಣಿಸಯ್ಯ ಮಹಪ ದಿನಪ ತೇಜ॥ ಶಾನೆ ಬೇಡ ಶಾಶ್ವತ ಸುಖಪೊಂದನೆ ನಾನು ಕೇಳಿ ಕೇಳಲು ಬಯಕೆನ್ನದೆ ಪೂಗು ಎನುತ ಸುಮ್ಮಾನದಳಿದು ಗುರು ನೀನೆ ನಿತ್ಯನೆನಿಸ್ಸೈ ॥ ೧೫ ॥

---

ಶ್ರೀಸುಖಾನಂದಾಬ್ಧಿ ಶಾಶ್ವತ ಭಾಸಮಾನ ಮಾನಸಾಂತ ।
ನಾಶರಹಿತ ನಮಾಮಿ ಭಕ್ತೋಲ್ಲಾಸ ಫಣಿಭೂಷ ॥ ಪ ॥

ದೋಷತಿಮಿರಪತಂಗಗಿರಿಕುಲವಾಸ ವಾಸವಾರ್ಚಿತಾಂಘ್ರಿ
ದೇಶಸುಭಾಸಮೇಳನದ ಅಭಿಲಾಷೆಗಭಯಗೊಂಡು ॥ ೧ ॥

ಫಾಲನಯನಕಪಾಲಡಮರುಗಶೂಲಹಸ್ತಸುನೀಲಕಂಧರ
ಮೂಲಶಿರ ಶಿರಮಾಲ ಚಂದಿರ ಜಾಹ್ನವೀಧರನೆ॥
ಕೀಲಪುರನಿರ್ಮಾಲ ಕಾಲಕಾಲ ನಿಗಮವಿಶಾಲ ಮುನಿಕುಲ
ಶೀಲಚಿದ್ಘನರೂಪಭಸಿತ ಕಲಾಪ ನಿಜದೋರು ॥ ೨ ॥

ಆರುವರ್ಗದ ಘೋರತನುವನು ಮೀರಿ ತೋರುವ ಕಾರಣಾಂಗದ
ನೀರ ನೀ ಮೈದೋರು ನಿರುಪಮ ನಿತ್ಯ ಎಮಗೊಲಿದು ॥
ಮಾರಮರ್ದನ ಮಂತ್ರವಾಚ್ಯ ವಿಚಾರವಾಚಕ ದೂರದೂರದ
ಲಾರಿಗೆಯು ಇಷ್ಟಾರ್ಥವೀವ ಉದಾರಿ ಸರ್ವಜ್ಞ ॥ ೩ ॥

ಕಾವಕರುಣಿಯದಾವ ದೇವರದೇವ ನೀ ಜಗಪಾವನಾತ್ಮಕ
ಭಾವಗಮ್ಯ ಷಂಾಕು ಭಜಕೋದ್ಧಾರಿ ಭವಹರನೆ ॥
ಓ ವಧುಪ್ರಿಯ ಆ ವ, ಶ, ಷ, ಸಂಭಾವನಾಧಿಪ ಅಷ್ಟದಳಗಳಿಜೀವ
ಜೀವಜ್ಯೋತಿರಾಮಯ ಮೂರ್ತಿ ದಯವಾಗು ॥ ೪ ॥

ದಕ್ಷಮುಖದಧ್ಯಕ್ಷ ಶಿಕ್ಷಾಪೇಕ್ಷ ಗಣಕುಲಪಕ್ಷ ಪರತರ
ಮುಕ್ಷಯಾನಗಜಾಜಿನಾಂಬರ ಅಕ್ಷಯಾತ್ಮಕನೇ ॥
ಕುಕ್ಷಿಯೊಳು ಈರೇಳು ಭುವನವ ರಕ್ಷಿಸುವ ಪರಮಾತ್ಮ ನಿನ್ನನು
ಈಕ್ಷಿಸಲ್ಕಳವಲ್ಲವೈ ಲಕ್ಷಾರ್ಥ ದಿನಮಣಿಯ ॥ ೫ ॥

ಬೋಧಮಯ ನೀನಾದ ಕಥನದಿ ಆದುದೈ ಉಪದೇಶ ಜಗದೊಳ
ಭೇದ ಭೇದ್ಯವೆಯಾಗಿ ಸೋಹಂ ಎಂದು ನಿಜತತ್ವ ॥
ಬೋಧಿಸುತ ಫಲಗೊಂಡು ಬ್ರಹ್ಮದ ಆದಿ ಅಂತ್ಯವದಾದ ನಿಷ್ಕಲ
ನಾದ ಗುರುವಾಗೆ ವಂದಿಸಲಾದೆ ಕೃಪೆಯಾಗು ॥ ೬ ॥

ರಾಮಣೀಯಕವಾದ ಶೈವೋದ್ಧಾಮನು ಬಲಗೊಂಡು ಮಲ್ಲನ
ನಾಮಪುರದೊಳಗಾಪ್ತಲಾ ಸುತ್ರಾಮ ವಂದ್ಯ ಪದ
ವ್ಯೋಮ ಭೂತಾತೀತ ಮುಕುತಿ ಸ್ತೋಮ ಸೋಮೆಕಟ್ಟೆ ಈಶನ
ನೇಮ ಸಿದ್ಧಿಯೊಳಾಗದೆ ನಿಸ್ಸೀಮ ನಿಜ ಸ್ತುತಿಯು ॥ ೭

---

ಸಾಮ ಗಾನಲೋಲ ಶಂಕರ ಪಾಹಿ ಸಾಮಗಾನಲೋಲ
ಸಾಮಜನನ ಪಿತ ಸೋಮಾಂಗನೆ ನಿತ್ಯ ಪ್ರೇಮಗೊಡೆನಗೆ ನೀ ॥
ಅಂಧಕಾಸುರ ಭಂಜನ ಬಂಧುರ ಭವ ಸಿಂಧು ಬಡಬಾನಲನ
ಇಂದುಶೇಖರ ಸುಂದರ ಜಾಹ್ನವೀಧರನೆಂದು ನುತಿಸುವಾನಂದವ
ಪಾಲಿಸು ॥ ೧ ॥

ಹರಿಹರಿಣಾಕರನೆ ಕರಕರಕೋಟಿ ಮಿರುಪತ್ತೈಜ ಸಮಾನೆ
ಹರಿ ಗಿರಿ ವಾಸನೆ ಹರಿ ಪುತ್ರ ನಾಶನೆ ವರಮೌನಿನುತನೆ ನೀ
ಪೊರೆದಂತೆ ಸಲಹೆನ್ನ ॥ ೨ ॥

ಅಜಹರಿಗಳವಡದ ನಿನ್ನನು ಈತು ಭಜಿಸಲಾದುದೇ ಮೋದ
ತ್ರಿಜಗದ ಒಡೆತನ ವಿಜಯ ವಿತ್ತವದೆಲ್ಲ ನಿಜ ಭಕ್ತರ ವಶವೆಂಬ
ನಿಜದಿ ನಾ ಸ್ತುತಿಸುವೆ ॥ ೩ ॥

ಕಾಮರೂಪಿಗಳಾದ ದಾನವ ಶಿರಸ್ತೋಮದೊಳರಗಳಿದ
ಭೀಮ ಭರ್ಗ ಶುಭನಾಮ ಸೋಮೆಕಟ್ಟೆ ಧಾಮ ಮಲ್ಲನ ಪುರ
ನೇಮಕ ಗೆರೆವೆ ನೀ ॥ ೪ ॥

---

**ರಾಗ ಪಂತುವರಾಳಿ. ಆದಿತಾಳ.**

ನಮೋನಮೋ ಎನ್ನುತ ನಮಿಸುತಲಿರ್ಪೆನು
ಕ್ರಮ ಗುರುವಿನ ಶ್ರೀಪಾದದಲಿ ॥
ತಮದುರಿತವ ಪರಿಹರಿಸುವ ದ್ಯುಮಣಿಯ
ಸಮದ ವಿರಕ್ತನ ಚರಣದಲಿ ॥ ೧ ॥

ನಿಗಮ ಶಾಸ್ತ್ರಗಳು ಅಗಣಿತ ಕಲಿ ಕೊಡೂ
ಜಗದ್ವಾಸನೆ ಬಗೆಯಾಂತಿಹುದು ॥
ಒಗುಮಿಗೆ ಭಕ್ತಿಯುನಗಲದೆ ಇರ್ದೊಡೆ
ಜಗದೀಶ್ವರ ಗತಿ ಮೆಚ್ಚು ಇದು ॥ ೨ ॥

ಸಂಕಲ್ಪವು ಸಿದ್ಧಿಗಳೆಂಬಿವುಗಳ
ಭೊಂಕನುಳಿದು ಮನ ಕೋಕದಲಿ ॥
ಅಂಕರಹಿತಶಶಾಂಕನ ತೇಜದಿ
ಶಂಕೆಯ ಮರೆದುರೆ ಶಾಂತಿಯಲಿ ॥ ೩ ॥

ಯಾಗದಾನಜಪನೀತಿಯು
ಯೋಗದ ಭೇದವು ಪೂಜೆಯು ಫಲವಿರಲಿ ॥
ಈಗ ನಿಜದಿ ನಿರ್ಮಲನಾಗದೆಯಿರೆ
ರೋಗಿ ಭೋಗಿ ಬರಿ ಕರ್ಮದಲಿ ॥ ೪ ॥

ನಾನೇ ಬ್ರಹ್ಮವು ಎನಲಹಂಕಾರವು
ನಾನಲ್ಲೆನಲದು ದೀನತ್ವ ॥
ನೀನೆ ಸಗುಣ ನಿಶ್ಚಿಂತನು ಎನಲು
ತಾನೇ ಸಾಧ್ಯವು ನಿಜತತ್ವ ॥ ೫ ॥

ಆಲಿಯು ನಿಲ್ಲಿಸಿ ಗಾಳಿಯು ಗೆಲ್ವುದು
ಮೇಲೆ ಮನಸು ಮನೆ ಗೂಡುವದು ॥
ಜಾಲ ಮೂಲ ಕಳೆದ್ಹೋಗಲು ಮಾಜದೆ
ಲೋಲ ಚಿತ್ತು ನಿಜ ಬೆಳಗುವುದು ॥ ೬ ॥

ಭಕ್ತಿಯಿಲ್ಲದಿರೆ ಮುಕ್ತಿಯು ದೊರಕದು
ಸತ್ಯವಾಕ್ಯ ಸಟೆಯಲ್ಲವಿದು ॥
ಯುಕ್ತಿ ಶಕ್ತಿ ಗತ್ರತ್ತ ಮೀರಿ ಸದ್ಭಕ್ತರ
ಭಕ್ತಿಯೊಳಿರುತಿಹುದು ॥ ೭ ॥

ಸುಟ್ಟು ದುರಿತವನು-ದಿಟ್ಟನಾದ ಬಳಿಕೆಷ್ಟು ದಿವಸ ಏತಕೆ ಮರೆವೆ ॥
ಭ್ರಷ್ಟನಾಗದತಿ ಕೆಟ್ಟ ಭವಕೆ ಹಿಮ್ಮೆಟ್ಟದಂತೆ ಸಾಧಿಸು ನಿಜವ ॥ ೮ ॥

ಸೋಮಕಟ್ಟೆಯ ನಾಮಕರ್ತ ಚಿದ್ವ್ಯೋಮಕಾಯ ಸದ್ಗುರುವರನು ॥
ಈ ಮಲ್ಲನಪುರ ನೇಮಕ ಮನದಭಿರಾಮನಾಗಿರೆ ಒರೆದಿದನು ॥ ೯ ॥